೩೮೪

# ಪುಣ್ಯಕೋಟಿ : ಒಂದು ಸಾಂಸ್ಕೃತಿಕ ಅಧ್ಯಯನ

ಶ್ರೀ ಮಹೇಶ ತಿಪ್ಪಶೆಟ್ಟಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜನವರಿ, ೧೯೮೯

ಉಪನ್ಯಾಸ ಗ್ರಂಥಮಾಲೆ

೩೮೪

# ಪುಣ್ಯಕೋಟಿ : ಒಂದು ಸಾಂಸ್ಕೃತಿಕ ಅಧ್ಯಯನ

ಶ್ರೀ ಮಹೇಶ ತಿಪ್ಪಶೆಟ್ಟಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜನವರಿ, ೧೯೮೯

ಪ್ರಕಾಶಕರು:

ಎಸ್. ಬಿ. ನಾಯಕ
ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಜನವರಿ, ೧೯೮೯
೫೦೦೦ ಪ್ರತಿಗಳು



ಬೆಲೆ : ರೂ. ೧=೦೦

ಮುದ್ರಕರು :

ಜಿ. ಬಿ. ಮನ್ಯಾಚಾರ
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

# ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕೂ ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೮೩ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು - ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜಿ. ಕೆ. ನಾರಾಯಣ ರೆಡ್ಡಿ
ಕುಲಪತಿಗಳು

# ಎರಡು ಮಾತು

ಗೋವಿನ ಹಾಡಿನ ಒಂದು ಸಾಂಸ್ಕೃತಿಕ ಅಧ್ಯಯನ ಮಾಡ ಬೇಕೆಂಬ ಹೊಳವು ದೊರೆತಿದ್ದು ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡಮಿ ಆಶ್ರಯದಲ್ಲಿ, ಹುನಗುಂದದಲ್ಲಿ ತಾಲೂಕ ಮಟ್ಟದ ಜಾನಪದ ಮೇಳ ಸಂಘಟಿಸಿದಾಗ, ಈ ಮೇಳದಲ್ಲಿ ಗೋವಿನ ಹಾಡಿಗೆ ಪೂರಕವಾದ ಬೇರೆ ಜಾನಪದ ಹಾಡುಗಳು ಪ್ರಸ್ತುತವಾದಾಗ ಇವುಗಳ ಸಾಮ್ಯತೆ ವಿಭಿನ್ನತೆಗಳ ಬಗ್ಗೆ ವಿಚಾರಿಸ ತೊಡಗಿದೆ. ಅದರ ಪರಿಣಾಮವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಹಾಗು ಈ ಪುಸ್ತಿಕೆ.

ನಿರಾಕಾರದಲ್ಲೇ ಉಳಿದಿದ್ದ ನನ್ನ ವಿಚಾರಕ್ಕೆ ಮೂರ್ತರೂಪ ಕೊಡಲು ಪ್ರೀತಿಯಿಂದ ಒತ್ತಾಯಿಸಿದ ಹಿರಿಯ ಮಿತ್ರ ಎಚ್.ವಿ. ನಾಗೇಶ, ಬನಹಟ್ಟಿಯಲ್ಲಿ ಭಾಷಣ ಮಾಡಲು ಆಹ್ವಾನಿಸಿದ ಪ್ರಸಾರಾಂಗದ ನಿರ್ದೇಶಕ ಎಸ್. ಬಿ. ನಾಯಕ, ಹಸ್ತಪ್ರತಿಯನ್ನು ಒಪ್ಪಗೊಳಿಸಿದ ಮಿತ್ರ ಮಲ್ಲಿಕಾರ್ಜುನ ಹಿರೇಮಠ ಇವರಿಗೆ, ಬನಹಟ್ಟಿಯಲ್ಲಿಯ ನನ್ನ ಉಪನ್ಯಾಸಕ್ಕೆ ಸೂಕ್ತ ಪ್ರತಿಕ್ರಿಯೆ ತೋರಿದ ಅಲ್ಲಿಯ ಸಭಿಕರಿಗೆ ಹಾಗೂ ಕಾರ್ಯಕ್ರಮದ ಸಂಘಟಕರಿಗೆ ಋಣಿಯಾಗಿದ್ದೇನೆ.

ಕೇವಲ ಗೋವಿನ ಹಾಡಿಗೆ ಸಂವಾದಿಯಾಗಿ ಎರಡು ಜಾನಪದ ಹಾಡುಗಳನ್ನು ವಿಶ್ಲೇಷಿಸಲು ತೊಡಗಿದಾಗ ಇದಕ್ಕೆ ಪೂರಕವಾಗಿ ಹಲವಾರು ಹಾಡುಗಳು ದೊರೆತಿವೆ. ಈ ಹಾಡುಗಳ ಸಂಪಾದಕರಿಗೆ ಋಣಿಯಾಗಿದ್ದೇನೆ.

ವಿ.ಎಂ. ಕಾಲೇಜ<br>ಹುನಗುಂದ

**ಮಹೇಶ ತಿಪ್ಪಶೆಟ್ಟಿ**

# ಪರಿವಿಡಿ

# ೧. ಪ್ರಸ್ತಾವನೆ

ಒಂದು ಜನಾಂಗದ ಸಂಸ್ಕೃತಿಗೆ ಹಾಗೂ ಸಾಹಿತ್ಯಕ್ಕೆ ನಿಕಟ ಸಂಬಂಧವಿದೆ. ಸಾಹಿತಿಯಾದವನು ತಾನು ಜೀವಿಸುವ ಸಮಾಜದಲ್ಲಿ ಸಮಾಜೀಕರಣ ಹೊಂದಿರುವದರಿಂದ ಆ ಬದುಕಿನ ಪ್ರತಿರೂಪವೆ ಸಾಹಿತ್ಯದ ಆಶಯ ಇಲ್ಲವೆ ಪ್ರೇರಕವಾಗುತ್ತದೆ. ಸಾಮಾಜಿಕ ಜೀವನ ಸಂಕೀರ್ಣವಾದಂತೆ, ಸಾಹಿತಿ ಬಳಸುವ ಸಂಕೇತಗಳು ಸಂಕೀರ್ಣಗೊಳ್ಳುತ್ತವೆ. ಉದಾ: ಜಾನಪದ ಶೈಲಿಯಲ್ಲಿ ಕ್ರೌರ್ಯ. ವಂಚನೆಗೆ. ಹುಲಿ ಮೊಸಳೆ ಉಪಯೋಗವಾಗಿರುವದನ್ನು ಕಾಣಬಹುದು. ಇದು ಹಿಂಸೆಯನ್ನು ವರ್ಣಿಸಲು ಬೊಮೇನಿಯನ್ನು ಆಧುನಿಕ ಸಾಹಿತಿ ಬಳಸಿಕೊಂಡರೆ ಆಶ್ಚರ್ಯ ಪಡಬೇಕಾಗಿಲ್ಲ. ಆದರೆ ಒಂದು ಸಮುದಾಯದ ಅವಿಭಾಜ್ಯ ಅಂಗವಾದ ವ್ಯಕ್ತಿ ತಾನು ಬೆಳೆಸಿಕೊಂಡ ಪೂರ್ವಗ್ರಹಗಳು ಈ ಅಭಿವ್ಯಕ್ತಿಗೆ ಕಾರಣವಾಗುತ್ತವೆ ಎಂಬ ಅಂಶವನ್ನು ಮರೆಯುವಂತಿಲ್ಲ.

ಒಂದು ಸಮಾಜದ ಸಂಸ್ಕೃತಿ ಅಖಂಡವಾದುದು ಎಂದರೂ, ಹಲವು ಪದರುಗಳಿಂದ ಕೂಡಿದ ಅದು ಇಡಿಯಾಗಿ ಕಾಣುತ್ತದೆ. ಸಂಸ್ಕೃತಿಯ ಈ ಪದರು (ಭಾಗ)ಗಳು ತಮ್ಮಷ್ಟಕ್ಕೆ ತಾವೇ ಸ್ವತಂತ್ರ ಸಾಮ್ರಾಜ್ಯಗಳೇನೂ ಅಲ್ಲ. ಅನೇಕ ಶಾಸ್ತ್ರಜ್ಞರು ಸಂಸ್ಕೃತಿಯ ಹಲವು ವಿಭಾಗಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈ. ಬಿ. ಟೈಲರ್‌ರವರ ಆದಿವಾಸಿ, ಅರೆ-

ನಾಗರಿಕ ಹಾಗು ನಾಗರಿಕ ವಿಂಗಡಣೆ, ಜಾನಪದ ವಿದ್ವಾಂಸರ ಜಾನಪದ ಸಂಸ್ಕೃತಿ, ಮಧ್ಯಮ ಸಂಸ್ಕೃತಿ ಹಾಗೂ ಶಿಷ್ಟ ಸಂಸ್ಕೃತಿಗಳ ವಿಂಗಡಣೆ, ಎಮ್. ಎನ್. ಶ್ರೀನಿವಾಸರ ಹಿಂದುತ್ವದ ವಿಭಾಗಗಳಾದ ಅಖಿಲ ಭಾರತ ಮಟ್ಟದ, ಪ್ರಾದೇಶಿಕ ಹಾಗೂ ಸ್ಥಾನಿಕ ಪರಂಪರೆ, ರೆಡ್‌ಫಿಲ್ಡ್‌ರ ಸ್ಥಾನಿಕ ಪರಂಪರೆ, ಹಾಗೂ ವಿಶಾಲ ಪರಂಪರೆಗಳ ವಿಂಗಡಣೆ ಮೇಲುನೋಟಕ್ಕೆ ಭಿನ್ನವಾಗಿ ಕಂಡರೂ ಅವುಗಳ ಅಂತರ್ಯದಲ್ಲಿ ಸಾಮ್ಯತೆ ಕಾಣಬಹುದು. ಹಾಗೆಯೇ ಈ ವಿವಿಧ ಸಂಸ್ಕೃತಿಗಳ ಪ್ರಭಾವವಲಯದಲ್ಲಿಯ ವ್ಯಕ್ತಿಗಳ ವರ್ತನೆ ಹಾಗೂ ವಿಚಾರಗಳಲ್ಲಿ ವ್ಯತ್ಯಾಸ ಕಾಣಬಹುದು. ತನ್ಮೂಲಕವಾಗಿ ಸಾಹಿತ್ಯದ ಈ ವಿವಿಧ ಸ್ತರಗಳಲ್ಲಿ ಸ್ವರೂಪವು ಭಿನ್ನತೆಗೊಳ್ಳುತ್ತದೆ.

ಇಲ್ಲಿ ಮಹತ್ವದ ಪ್ರಶ್ನೆ ಎಂದರೆ ಶಿಷ್ಟತೆಯ ಪ್ರಭಾವ ದಿಂದ ಜಾನಪದ ಸೃಷ್ಟಿಯಾಗುತ್ತದೆಯೆ ಅಥವಾ ಜಾನಪದದ ಮಣ್ಣು ಗೊಬ್ಬರದಲ್ಲಿ ಶಿಷ್ಟತೆ ಚಿಗರೊಡೆಯುತ್ತದೆಯೆ ಎಂಬುದು. ಇದು ಬೀಜ ಹಾಗೂ ಮರದ ಪ್ರಶ್ನೆಯಂತೆ ಕವಚ ಕಂಠಕ ಪ್ರಶ್ನೆ ಯಾಗಿ ಕಾಣಬಹುದು. ಆದರೆ ಬದುಕಿನ ಬೇರು ಜಾನಪದ ದಲ್ಲಿವೆ ಎಂಬ ಅಂಶವನ್ನು ಮರೆಯುವಂತಿಲ್ಲ. ಶಿಷ್ಟ ಸಾಹಿತ್ಯವು ಅಭಿವ್ಯಕ್ತಿಗಾಗಿ ಸೋತಾಗ ಜಾನಪದ ಅದರ ನೆರವಿಗೆ ಬರುತ್ತದೆ. ಎಂಬ ಅಂಶವನ್ನು ಪ್ರಾಸಂಗಿಕವಾಗಿ ಸ್ಮರಿಸಬಹುದು. ಆದ್ದರಿಂದ ಜಾನಪದ ಮೌಲ್ಯಗಳು ಅಜರಾಮರವಾಗಿರುತ್ತವೆ. ತೊಡಿಕೆ ಭಿನ್ನವಾದರೂ ತಿರುಳು ಬದಲಾಗುವದು ಕಠಿಣ. ಅಂತೆಯೆ ಡೊಳ್ಳಿನ ಹಾಡಿನ, ಸುವ್ವಿ ಹಾಡಿನ, ಅಕಳ ಹಾಡಿನ

ಹಾಗೂ ಚಿಗರಿ ಹಾಡಿನ ಗೀತ ಕಥಾನಕವು ಪುಣ್ಯಕೋಟಿ ಹಾಡಿ
ಗಿಂತ ಬದುಕಿನ ಭಾವನೆ, ಘಟನೆಗಳನ್ನು ವಿವಿಧ ಆಯಾಮುಗಳಿಂದ
ನೇರ ತಟ್ಟುತ್ತದೆ ಎಂದು ಹೇಳಬಹುದು.

ಶಿಷ್ಟ ಸಾಹಿತ್ಯ ಸಮಕಾಲೀನ ಬದುಕಿನ ಕೈಗನ್ನಡಿ ಎಂದರೂ ಅದು ಹೆಚ್ಚಾಗಿ ಆದರ್ಶೀಕೃತ ಮೌಲ್ಯಗಳನ್ನು ಪ್ರತಿಪಾದಿಸಲು ಯತ್ನಿಸುತ್ತದೆ. ಆದರೆ ಜಾನಪದವು ಬದುಕಿಗೆ ತೀರ ಸಮೀಪವಾಗಿ ಹೆಚ್ಚು ವಾಸ್ತವಿಕವಿರುತ್ತದೆ. ಉದಾಹರಣೆಯಾಗಿ ಶ್ರೀ ಅರವಿಂದರು, "The tiger and the deer" ಎಂಬ ಕವನದಲ್ಲಿ ಆಶಾವಾದಿ ಭವಿಷ್ಯ ಕಲ್ಪಿಸುತ್ತಾರೆ. ಸೌಂದರ್ಯದ (ಸತ್ಯ) ಸಂಕೇತವಾದ ಚಿಗರಿ ಹಾಗೂ ಕುರೂಪತನದ (ಕ್ರೌರ್ಯ) ಪ್ರತೀಕವಾದ ಹುಲಿ ಕಾಡಿನಲ್ಲಿ ಒಟ್ಟಿಗೆ ಜೀವಿಸುತ್ತವೆ. ಹುಲಿ ಚಿಗರಿಯನ್ನು ತಿನ್ನುತ್ತದೆ. (ಬಂಡವಾಳಶಾಹಿ, ಬಡತನದ ಸಂಬಂಧ ಇಲ್ಲಿ ಕಲ್ಪಿಸಬಹುದು) ಆದರೆ ಕೊನೆಗೆ ಕವಿ ಸೌಂದರ್ಯ (ಸತ್ಯ) ಜಯಗಳಿಸುತ್ತದೆ ಎಂಬ ಆಶಯ ವ್ಯಕ್ತಪಡಿಸಿದ್ದಾರೆ. ಅಂದರೆ Ideology (ಆದರ್ಶ) ಯು, Actuality (ವಾಸ್ತವಿಕತೆ) ಯಿಂದ ದೂರವಾಗಿದೆ ಎಂಬುದನ್ನು ಗ್ರಹಿಸಬಹುದು. ಆದರಂತೆ ಶಿಷ್ಟಗೋವಿನ ಹಾಡಿನಲ್ಲಿ ಹುಲಿ ಹಾರಿ ಬಿದ್ದು ಸತ್ತರೆ, ಇತರ ಜಾನಪದ ಹಾಡುಗಳಲ್ಲಿ ಈ ಘಟನೆ ಬದಲಾವಣೆ ಹೊಂದಿದೆ. ಇಲ್ಲಿ ಸತ್ಯ, ಸೌಂದರ್ಯ, ಕ್ರೌರ್ಯ, ಕುರೂಪ ಅಂಶಗಳು ಬದುಕಿನಲ್ಲಿ ಒಟ್ಟೊಟ್ಟಿಗೆ ಇರುತ್ತವೆ ಎಂಬುದಾಗಿ ತಿಳಿಯುತ್ತದೆ. ಆದರೆ ಕ್ರೌರ್ಯ ಕುರೂಪಗಳಿದ್ದರೂ ಇವು ಪ್ರಾಬಲ್ಯ ಪಡೆಯಬಾರದು ಎಂಬ ಆಶಯವೂ ಇದೆ.

## ೨. ಗೋವಿನ ಹಾಡು : ಒಂದು ಕಥಾನಕ

ಜಾನಪದ ಸಾಹಿತ್ಯ ವೃಕ್ಷದ ಹಲವು ಶಾಖೆಗಳಲ್ಲಿ ಗೀತ–ಕಥಾನಕ ಇಲ್ಲವೆ ಕಥನ ಕಾವ್ಯ ಒಂದು ಪ್ರಮುಖ ಶಾಖೆಯಾಗಿದೆ. ಇಂಗ್ಲೀಷ ಭಾಷೆಯಲ್ಲಿ ಕಾಣುವ 'ಬ್ಯಾಲೆಡ್'ಗೆ ಇದನ್ನು ಹೋಲಿಸಬಹುದು. ಈ ಗೀತ–ಕಥಾನಕಗಳಲ್ಲಿ ಮೂರು ಉಪ ಶಾಖೆಗಳನ್ನು ತಜ್ಞರು ಗುರುತಿಸಿದ್ದಾರೆ. ಇವುಗಳಲ್ಲಿ ನೀಳ್ಗವನ ಒಂದು ಉಪಶಾಖೆಯಾಗಿದೆ. ನೀಳ್ಗವನ ಕಿರಿದಾದ ಕಥೆ ಹೊಂದಿರುತ್ತದೆ; ಸೀಮಿತ ವ್ಯಾಪ್ತಿ, ಕಡಿಮೆ ಪಾತ್ರವನ್ನೊಳಗೊಂಡು ಚಿಕ್ಕ ಘಟನೆಯನ್ನು ಇದು ಆಧರಿಸಿರುತ್ತದೆ. ಕ್ಲಿಷ್ಟತೆಗೆ, ಸಂಕೀರ್ಣತೆಗೆ ಇಲ್ಲಿ ಅವಕಾಶಗಳಿಲ್ಲ. ಸರಳ ಹಾಗೂ ನೇರ ಕಥೆ, ಭಾಷೆಗಳಿಂದ ಕೂಡಿ ಹಲವು ರಸ, ಸ್ವಾನುಭಾವವೂ ಇಲ್ಲಿ ಅಡಕವಾಗಿರುತ್ತದೆ. ಗೋವಿನಹಾಡು ಇಂತಹ ಪ್ರಕಾರಕ್ಕೆ ಸೇರಿದೆ.

ಕನ್ನಡದ ಜನಮನದಲ್ಲಿ 'ಗೋವಿನ ಹಾಡು' ನಿತ್ಯನೂತನ ಸ್ಥಾನ ಪಡೆದಿದೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಮನಮುಟ್ಟುವ ಧಾಟಿಯಿಂದ ಮಕ್ಕಳಿಗೆ ಇದರ ಕೆಲವು ಭಾಗಗಳನ್ನು ಕಲಿಸುವದರಿಂದ, ಇದು ಒಳಗೊಂಡ ಮೌಲ್ಯ ಹಾಗೂ ಕಥೆಯಿಂದಾಗಿ ಕನ್ನಡದ ಎಲ್ಲ ಕಥನಕಾವ್ಯಗಳಲ್ಲಿ ವಿಶಿಷ್ಟ ಸ್ಥಾನ ಹೊಂದಿದೆ.

ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಹರಿದು ಬಂದು ಜನಮನ ಗೆದ್ದ 'ಗೋವಿನ ಹಾಡು' ಪಠ್ಯ ಪ್ರವೇಶಿಸಿ ಈಗಾಗಲೇ ಶಿಷ್ಟ ಸಾಹಿತ್ಯದ ಭಾಗವಾಗಿದೆ. ಗೋವಿನ ಹಾಡಿನ ರೂಪವನ್ನೇ ಹೋಲುವ ಹಲವು ಜಾನಪದ ಹಾಡುಗಳು 'ಆಕಳು ಹಾಡು', 'ಮಾತೃ ವಾತ್ಸಲ್ಯ' 'ಚೆನ್ನಬಸವನ ಹಾಡು' 'ಗೋಸ್ಯಪ್ಪನ ಹಾಡು' 'ಚಿಗರಿ ಹಾಡು' ಮುಂತಾದ ಹೆಸರುಗಳಿಂದ ದೊಳ್ಳಿನ ಹಾಡಿನಲ್ಲಿ, ಹೆಣ್ಣು ಮಕ್ಕಳ ಸುವ್ವಿ ಹಾಡಿನಲ್ಲಿ, ಕೋಲಾಟದ ಪದಗಳಲ್ಲಿ, ರಿವಾಯತಗಳಲ್ಲಿ ಕಂಡು ಬಂದಿವೆ. ಶಿಷ್ಟ ಸಾಹಿತ್ಯದ ಭಾಗವಾಗಿರುವ ಗೋವಿನ ಹಾಡಿನ ಮೇಲಿರುವ ವೈದಿಕ ಪರಂಪರೆಯ ಪ್ರಭಾವವನ್ನು ಹಾಗೂ ಜಾನಪದ ಹಾಡುಗಳಲ್ಲಿ ಕಂಡುಬರುವ ಅವೈದಿಕ ಸಂಸ್ಕೃತಿಯ ಪ್ರಭಾವವನ್ನು ವಿಶ್ಲೇಷಿಸುವದು ಈ ಪುಸ್ತಿಕೆಯ ಉದ್ದೇಶವಾಗಿದೆ.

## ಗೋವಿನ ಹಾಡು-ಹಿನ್ನೆಲೆ ಕಥಾವಸ್ತು :

ಗೋವಿನ ಕಥೆ ಪ್ರಾಚೀನವಾದುದೆಂದು ನಂಬಲಾಗಿದೆ. "ಇತಿಹಾಸ ಸಮುಚ್ಚಯ" ಎಂಬ ಸಂಸ್ಕೃತ ಗ್ರಂಥದ ಮುವತ್ತನೆಯ ಅಧ್ಯಾಯದಲ್ಲಿ ಬರುವ 'ಬಹು ಲೋಪಾಖ್ಯಾನಕ್ಕೂ' ಗೋವಿನ ಹಾಡಿಗೂ ಹೆಚ್ಚಿನ ಹೋಲಿಕೆ ಇದೆ. ಅಲ್ಲಿ ಹುಲಿಯ ಹೆಸರು 'ಕಾಮರೂಪಿ' ಹಾಗೂ ಗೋವಿನ ಹೆಸರನ್ನು 'ಬಹುಲಾ' ಎಂದು ಬಳಸಲಾಗಿದೆ. ಮಹಾಭಾರತದಲ್ಲಿಯೂ ಈ ಕಥೆಯನ್ನು ಹೋಲುವ ವಿವರಣೆ ಇದೆಯಂತೆ. ಭೀಷ್ಮನು ಯುಧಿಷ್ಟರನಿಗೆ ಈ ಕಥೆಯನ್ನು ಮೊದಲು ಹೇಳಿದನೆಂಬ ವಿವರಣೆ ಇದೆ.

ಸಂಸ್ಕೃತ ಮೂಲದ ಈ ಹಾಡು ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಗೋವಿನ ಹಾಡು ಎಂಬ ಹೆಸರಿನಲ್ಲಿ ರೂಪಾಂತರ ಪಡೆದಿದೆ ಎಂದು ನಂಬಲಾಗಿದೆ. ಈ ಹಾಡಿನ ಕವಿ ಇಂದಿಗೂ ಅಜ್ಞಾತವಾಗಿಯೇ ಇದ್ದಾನೆ.

'ಪದ್ಮನಾಭನೆ ಪರಂಧಾಮನೆ
ಮದ್ದುರ ಶ್ರೀ ನಾರಸಿಂಹನೆ
ಮುದ್ದು ವರಗಳ ಕೊಡುವ ನಿಮಗೆಯು
ನಮೋ ನಮೋ ಮಂಗಳಂ'

ಎಂಬ ವಿವರಣೆ ಹಾಡಿನ ಕೊನೆಗೆ ಬರುವದರಿಂದ ಡಿ.ಎಲ್ ನರಸಿಂಹಾಚಾರ್ಯರು ಕವಿ ಮದ್ದೂರಿನವನಿರಬೇಕು. ಇಲ್ಲವೆ ದೇವರ ಒಕ್ಕಲಿನವನಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿಗೆ ಕ್ರಿ. ಶ. ೧೮೦೦ಕ್ಕಿಂತ ಮೊದಲು ಈ ಗೀತ ಕಥಾನಕ ಹುಟ್ಟಿರಲಾರದೆಂದು ತಜ್ಞರ ಅಭಿಪ್ರಾಯವಾಗಿದೆ.

ಧರಣಿ ಮಂಡಲ ಮಧ್ಯದೊಳಗೆ
ಮೆರೆವುದೈವತ್ತಾರು ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು'

ಎಂಬ ವಿವರಣೆಯೊಂದಿಗೆ ಹಾಡು ಪ್ರಾರಂಭವಾಗುತ್ತದೆ. ಅರುಣಾದ್ರಿಯನ್ನು ಬಳಸಿದ ಏಳು ಗಿರಿಗಳ ನಡುವೆ ಒಂದು ಮಹಾರಣ್ಯವಿದೆ. ಅಲ್ಲಿ ಕಾಳಿಂಗನೆಂಬ ಗೊಲ್ಲನ ದೊಡ್ಡಿ ಇದೆ. ಈ ಗೀತ ಕಥಾನಕದ ಮೊದಲಿನ ಸುಮಾರು ಇಪ್ಪತ್ತು ನುಡಿಗಳು

ಕಾಡಿನ ವರ್ಣನೆಗೆ ಮೀಸಲಾಗಿವೆ. ಇಲ್ಲಿ ಬರುವ ವರ್ಣನೆಯು ಬಹು ರಮ್ಯವಾಗಿದೆ.

ಮೊಲ್ಲೆ ಮಲ್ಲಿಗೆ ಮುಗುಳು ಸಂಪಿಗೆ
ಚೆಲ್ವ ಜಾಜಿಯು ಸುರಗಿ ಸುರ ಹೊನ್ನೆ
ಎಲ್ಲಿ ನೋಡಲು ಧವನ ಕೇತಕಿ
ಅಲ್ಲಿ ಮೆರೆದವರಣ್ಯದಿ..............
..................................

'ವರಹ ಶಾರ್ದೂಲ ಸಿಂಹವಾರಣ
ಕರಡಿ ಕಾಡೆಮ್ಮೆ ಕಡವೆ ಮೃಗಗಳು
ಅರುಣ ಸಾರಗ ಚಿಕ್ಕ ಜಂಬುಕ
ಮರೆ ಹುಲ್ಲೆ ಸಿಂಹ ಮುಸುವನು'

ಹೀಗೆ 'ಕಾಡು ಹಾಗು ಕಾಡಿನಲ್ಲಿ ವಾಸಿಸುವ ಪ್ರಾಣಿ ಪಕ್ಷಿಗಳ ವಿವರಣೆಯು ನಂತರ ಕಾಳಿಂಗ ಗೊಲ್ಲನ ವ್ಯಕ್ತಿತ್ವದ ವರ್ಣನೆ ಇವೆ. ಇಲ್ಲಿ ಭವ್ಯ ಮಾನವನಾಗಿ ಕಾಳಿಂಗ ಗೋಚರಿಸಿದ್ದಾನೆ:

'ಇಟ್ಟ ಮುತ್ತಿನ ಒಂಟಿ ಬಾವುಲಿ
ಕಂಠ ಮಾಲೆ ಪದಕ ಸರಗಳು
ದಿಟ್ಟತನದಲಿ ಧರಿಸಿ ಮೆರೆದನು
ಗಂಟೆ ಮೊದಲಾದೊಡವೆಯು'

ಈ ಕಾಳಿಂಗ ಗೊಲ್ಲನ ದೊಡ್ಡಿಯಲ್ಲಿದ್ದ ಹಸುಗಳು ನಿತ್ಯ ಅರಣ್ಯದಲ್ಲಿ ಮೇಯ್ದು ದೊಡ್ಡಿಗೆ ಮರಳುವುದು ಪರಿಪಾಠ

ವಾಗಿತ್ತು. ನಂತರದ ಹದಿನೈದು ನುಡಿಗಳಲ್ಲಿ ಕೊಳಲನೂದುವ ಕಾಳಿಂಗನು ಹಸುಗಳನ್ನು ಹೆಸರುಗೊಂಡು ಕರೆವ ರೀತಿ, ಆಕಳ ಗಳು ಕಾಡಿನಲ್ಲಿ ಮೇಯುವ ವಿಧಾನ ವರ್ಣಿತವಾಗಿದೆ.

'ಉದಯ ಭಾಸ್ಕರ ದೇವಿ ಬಾರೆ
ಚದುರಗುಣ ಸಂಪನ್ನೆ ಬಾರೆ
ಹೃದಯ ನಿರ್ಮಳೆ ನೀನು ಬಾರೆಂದು
ಹರುಷದೊಳು ಗೊಲ್ಲ ಕರೆದನು'

ವಾಸ್ತವಿಕವಾಗಿ ಕಥೆ ಇಲ್ಲಿಂದ ಪ್ರಾರಂಭವಾಗುತ್ತದೆ ಒಂದು ದಿನ ಹಸುಗಳೆಲ್ಲಾ ಕಾಡಿನಲ್ಲಿ ಮೇಯ್ದು ದೊಡ್ಡಿಗೆ ಮರಳುವಾಗ, ಅವುಗಳ ಕೊರಳ ಗಂಟೆಯ ಶಬ್ದ ಕೇಳಿ, ಏಳು ದಿವಸಗಳಿಂದ ಉಪವಾಸವಿದ್ದ 'ಅರ್ಬುತ' ಎಂಬ ವ್ಯಾಘ್ರ ಹಸು ಗಳ ಮೇಲೆ ಎರಗುತ್ತದೆ. ಆಗ ಆಕಳುಗಳೆಲ್ಲಾ ದಿಕ್ಕೆಟ್ಟು ಓಡಿ ಹೋಗುತ್ತವೆ. ತನ್ನ ಕಂದನನ್ನು ನೆನೆದುಕೊಂಡು ಸಾವಕಾಶ ವಾಗಿ ಬರುವ 'ಪುಣ್ಯಕೋಟಿ' ಎಂಬ ಹಸುವನ್ನು ಹುಲಿ ಅಡ್ಡ ಗಟ್ಟಿ ತಿನ್ನ ಬಯಸುತ್ತದೆ.

'ಪುಣ್ಯಕೋಟಿ ಎಂಬ ಪಶುವನು
ತಾನು ತಿಂದೇನೆಂದು ಹುಲಿಯು
ಚೆನ್ನ ಗೋವನು ಅಡ್ಡಗಟ್ಟಿ
ತಿನ್ನಯತ್ನಿಕರಿಸಿತು'

ಇಲ್ಲಿ ಹುಲಿ ಹಾಗು ಹಸುವಿನ ಸಂಭಾಷಣೆ ಅತ್ಯಂತ ಅರ್ಥಪೂರ್ಣವಾಗಿ ಮೂಡಿ ಬಂದಿದೆ. ಹಸು, ಹುಲಿಗೆ ದೈನ್ಯದಿಂದ ಹೇಳುತ್ತದೆ :

'ಹಾಳು ಮಾಡುವ ಗರತಿಯಲ್ಲಿ

..................................

ನಾನು ಮೆಟ್ಟಿದ ಭೂಮಿ ಬೆಳೆವುದು'

..................................

ಅಡವಿಯೊಳಗಣ ಹುಲ್ಲ ಮೇಯುವೆ
ಮಡುವಿನೊಳಗಣ ನೀರ ಕುಡಿಯುವೆ
ಒಡೆಯ ನಾಜ್ಞೆಯಿಂದಲಿರುವೆನು
ಕಡೆ ಹಾಯಿಸು ಹುಲಿರಾಯನೆ

ಕೋಪಗೊಂಡ ಹುಲಿ :

ಮುನ್ನ ಪಾಂಡವ ಸತಿಯು ಹುಸಿದು
ತನ್ನ ನಿಜವನ ತಪ್ಪಿ ನಡೆವಳು
ನಿನ್ನ ನಂಬುವರಾರು ಈಗ
ನಿನ್ನ ನಾ ಬಿಡೆನೆಂದಿತು

ಆಗ ಹಸುವು ದೊಡ್ಡಿಯಲ್ಲಿದ್ದ ತನ್ನ ಮಗುವಿಗೆ ಹಾಲು ಕೊಟ್ಟು ಖಂಡಿತ ಬರುವೆನೆಂದು ಭಾಷೆ ನೀಡಿ ಮರಳುತ್ತದೆ. ಇಲ್ಲಿ ಬರುವ ತಾಯಿ ಮಗುವಿನ ಸಂಭಾಷಣೆ, ಪುಣ್ಯಕೋಟಿ ಕರುವಿಗೆ ಹೇಳುವ ಉಪದೇಶ ಹಾಗೂ ತನ್ನ ಕಂದನನ್ನು ನೋಡಿ ಕೊಳ್ಳಲು ಇತರ ಹಸುಗಳಿಗೆ ಕೇಳಿಕೊಳ್ಳುವ ರೀತಿಯಲ್ಲಿ ಪ್ರೀತಿ, ಕರುಣೆ, ವಾತ್ಸಲ್ಯ ಉಕ್ಕಿ ಹರಿದಿವೆ.

'ಸತ್ಯವೆ ನಮ್ಮ ತಾಯಿ ತಂದೆ
ಸತ್ಯವೆ ನಮ್ಮ ಸರ್ವಬಳಗ
ಸತ್ಯ ವಾಕ್ಯಕ್ಕೆ ತಪ್ಪಿದರೆ
ಅಚ್ಯುತಾಹರಿ ಮೆಚ್ಚನು'
…………………… …
"ತಬ್ಬಲಿಯಾದೆಲ್ಲೊ ಮಗನೆ
ಹೆಬ್ಬುಲಿಯ ಬಾಯಿಗೆ ಹೋಗುವೆನು"–
ಎಂದು ಹಸು ಹೇಳಿದಾಗ
"ಅಮ್ಮನೆಂದು ಕರೆವ ಬಾಯಲಿ
ಮಣ್ಣು ಹಾಕಿದ ಶಿವನು ಎನುತಲಿ"–
ಎಂದು ಕರು ಮಿಡುಕಿದಾಗ

ಮಾನವೀಯ ಸಂವೇದನೆಗಳು ತಮ್ಮ ಪರಾಕಾಷ್ಠತೆಯನ್ನು ಮುಟ್ಟಿವೆ. ಕೊಟ್ಟ ಭಾಷೆಯನ್ನು ಪೂರೈಸಲು ಹಸುವು ಗವಿಯ ಬಾಗಿಲಿಗೆ ಬಂದು "ನನ್ನ ಆಹಾರ ಮಾಡಿಕೊ" ಎಂದು ಹುಲಿಯನ್ನು ಹಸು ಕೇಳಿಕೊಳ್ಳುತ್ತದೆ. ಆಗ ಹುಲಿ—

ಮೂರು ಮೂರ್ತಿಗೆ ಕೈಯ ಮುಗಿದು
ಸೇರಿ ಎಂಟು ದಿಕ್ಕ ನೋಡಿ
ಹಾರಿ ಆಕಾಶಕ್ಕೆ ನೆಗೆದು
ತನ್ನ ಪ್ರಾಣವ ಬಿಟ್ಟಿತು

ಕೊನೆಗೆ ಶಿವನು ಹುಲಿಗೆ ಮೋಕ್ಷ ನೀಡಿದನು. ಆ ದಿನವನ್ನು ಸಂಕ್ರಾಂತಿ ಹಬ್ಬವನ್ನಾಗಿ ಆಚರಿಸಬೇಕೆಂದು ಹಸು ಗೊಲ್ಲ

ನಿಗೆ ಹೇಳುತ್ತದೆ. ಈ ಕಥೆ ಹೇಳಿದವರಿಗೆ ಕೇಳಿದವರಿಗೆ ಅಚ್ಯುತನು ಸಂಪತ್ತು ಸೌಭಾಗ್ಯ ನೀಡುತ್ತಾನೆಂದು ಕಥೆ ಮುಕ್ತಾಯವಾಗುತ್ತದೆ.

ಹಸುವಿನ ವರ್ತನೆಯಿಂದ ಹುಲಿ ಹೇಗೆ ಪರಿವರ್ತನೆಯಾಯಿತೆಂಬುದು ಈ ಹಾಡಿನ ಕೇಂದ್ರ ವಿಷಯವಾಗಿದೆ. ಈ ಹಾಡಿನಲ್ಲಿ ಅಡಗಿರುವ ವರ್ತನವೆಂದರೆ 'ಹುಲಿ' ಹಿಂಸೆ ಕ್ರೌರ್ಯದ ಸಂಕೇತವಾಗಿದೆ. 'ಆಕಳು' ಸತ್ಯ ಅಹಿಂಸೆಯ ಸಂಕೇತವಾಗಿದೆ. ಇಲ್ಲಿ ಹುಲಿಯ ಸಾವು ಹಿಂಸೆಯ ಸಾವಾಗಿದೆ. ಅಂದರೆ ಸತ್ಯ ಅಹಿಂಸೆಯ ಮುಂದೆ ಕ್ರೌರ್ಯ. ಹಿಂಸೆ ಸಾಯುತ್ತವೆ ಎಂದು ಹೇಳಬಹುದು. ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರ ಚಿಂತನೆ. ಸಾಧನೆ. ವ್ಯಕ್ತಿತ್ವಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಅವರು ಈ ಕಥಾನಕವನ್ನು ಮೆಚ್ಚಿಕೊಂಡಿದ್ದರೆಂದು ಹೇಳಲಾಗುತ್ತದೆ.

## ೩. ಇತರ ಗೀತ ಕಥಾನಕಗಳು

ಮೇಲೆ ವಿವರಿಸಿದ ಗೋವಿನ ಹಾಡಿನ ರೂಪವನ್ನೇ ಹೋಲುವ ಇತರ ಕೆಲವು ಲಭ್ಯ ಜನಪದ ಹಾಡುಗಳನ್ನು ಪರಿಶೀಲಿಸೋಣ.

### ೧. ಚೆನ್ನಬಸವನ ಹಾಡು (ಡೊಳ್ಳಿನ ಹಾಡು)

ಈ ಭೂಮಿ ಈ ಕಲಿಯುಗದೊಳಗ
ಲಿಂಗದ ರಾಮರೆಡ್ಡೇರ
ಲಿಂಗದ ರಾಮರೆಡ್ಡೇರ ಆಕಳ ಸಾಕತ್ತೈದಾರ
ಪುಟ್ಟೊಟ್ಟು ಹಾಕ್ಯಾರ ಕೊಡ ನೀರು ಕುಡಿಸ್ಯಾರ
ಗೊಡ್ಡಿ ಗೋವಿ ಎಂದು ಹೊಡೆದಾರ

ಚೆನ್ನಬಸವನ ಹಾಡು ಎಂದು ಕರೆಯಲ್ಪಡುವ ಈ ಡೊಳ್ಳಿನ ಹಾಡಿನಲ್ಲಿ ಲಿಂಗದ ರಾಮರೆಡ್ಡೇರ ಎಂಬುವರು ಆಕಳ ಸಾಕುತ್ತಿದ್ದಾರೆ (ಸಾಂದರ್ಭಿಕವಾಗಿ ಈ ಹೆಸರನ್ನು ಹಾಡುಗಾರರು ಬದಲಿಸಬಲ್ಲರು). ಬಂಜೆಯಾದ ಆಕಳಿಗೆ ಪುಟ್ಟೊಟ್ಟು ಹಾಕಿ ಕೊಡ ನೀರು ಕುಡಿಸಿ ಗೊಡ್ಡಿ (ಬಂಜೆ) ಎಂದು ಅಡವಿಗೆ ಮೇಯಲು ಬಿಡುತ್ತಿದ್ದರು.

'ಕೊಂಬಿನ ವನೆಯುತ ಕೊಳಗನ ಚಿಮ್ಮುತ
ಬಾಲ ಭೂಮಿಗೆ ಎಳೆಯುತ ಗೋವ್ವವ್ವ
ಕಾಡ ರುದ್ರನ ಅಡವಿಗೆ
ಕಾಡ ರುದ್ರನ ಅಡವಿಯೊಳಗೆ ಇಂಜಾಣ
ಮಲಿ ಮಂಜ್ಯಾಣ

ನಿತ್ಯ ಕಾಡ ರುದ್ರನ ಅಡವಿಗೆ ಮೇಯಲು ಹೋಗುತ್ತಿದ್ದ ಆಕಳು ತನ್ನ ಬಂಜೆತನ ನೀಗಲು ಒಂದು ದಿನ ಶಿವನಲ್ಲಿಗೆ ಹೋಗುತ್ತದೆ. 'ಎಂದೂ ಬಾರದ ಗೋವ್ವನ್ನ' ಇಂದು ಏಕೆ ಬಂದೆ ಎಂದು ಶಿವನು ಕೇಳುತ್ತಾನೆ. ಹುಟ್ಟಿ ಹನ್ನೆರಡು ವರ್ಷವಾಯಿತು. ಮಕ್ಕಳಾಗಲಿಲ್ಲ. ಮಕ್ಕಳ ಫಲ ಕೊಡು ಎಂದು ಆಕಳು ಶಿವನಲ್ಲಿ ಬೇಡಿಕೊಳ್ಳುತ್ತದೆ. ನಾಲ್ಕು ಪಾದದ ಧೂಳು (ಭಸ್ಮ) ತೆಗೆದು ಆಕಳಿನ ಸೆರಗಿಗೆ ಕಟ್ಟಿ ಶಿವ ಆಶೀರ್ವದಿಸಿ ಬೀಳ್ಕೊಡುತ್ತಾನೆ. ಒಂಭತ್ತು ತಿಂಗಳ ನಂತರ ಚೆನ್ನಬಸವನೆಂಬ ಕರು ಹುಟ್ಟುತ್ತದೆ. ಆಗ ಆಕಳಿಗೆ ಮಕ್ಕಳ ತಾಯಿಯೆಂದು ಕರೆಯುತ್ತಾರೆ.

ಒಂದು ದಿನ ಅರಣ್ಯಕ್ಕೆ ಮೇಯಲು ಹೋದಾಗ ಅಲ್ಲಿ ಹುಲಿ 'ನಿನ್ನನ್ನು' ತಿನ್ನುತ್ತೇನೆಂದು ಆರ್ಭಟಿಸುತ್ತದೆ. ಮನೆಯಲ್ಲಿ ಸಣ್ಣ ಕರುವಿಗೆ ಹಾಲು ಕೊಟ್ಟು ಬರುವೆನೆಂದು ಆಕಳು ಹೇಳಿದಾಗ ನೀನು ಪುನಃ ಬರುತ್ತಿ ಎಂಬುದಕ್ಕೆ ಸಾಕ್ಷಿ ಏನೆಂದು ಹುಲಿ ಕೇಳಿದಾಗ

'ಹೊಕ್ಕಳದಾನs ಹಾಲ ಕರೆದು
ಎಕ್ಕಿ ಗಿಡದ ಜಾಮೀನs ಕೊಟ್ಟಾಳ
ಮಲಿಯು ಮಣಿಗಿನ ಕಾಲ ಕರೆದು
ಜಾಲಿ ಗಿಡದ ಜಾಮೀನs ಕೊಟ್ಟಾಳ'

ಎಕ್ಕಿ ಗಿಡ, ಜಾಲಿ ಗಿಡಗಳ ಜಾಮೀನು ಕೊಟ್ಟ ಆಕಳು ಮನೆಗೆ ಬಂದು ಚೆನ್ನಬಸವನಿಗೆ ಹಾಲುಣಿಸುತ್ತ ಕೆಲವು ಉಪದೇಶದ ಮಾತು ಹೇಳುತ್ತದೆ. ಇಷ್ಟೆಲ್ಲ ಹೇಳುವ ತಾಯಿ

ನೀನೆಲ್ಲಿಗೆ ಹೋಗುವೆಯೆಂದು ಕರು ಕೇಳಿದಾಗ, ಹುಲಿರಾಯನಿಗೆ ವಚನವಿತ್ತ ವಿಷಯ ಹೇಳುತ್ತದೆ. ಕರು ತಾನೂ ಹಟ ಮಾಡಿ ತಾಯಿಯನ್ನು ಹಿಂಬಾಲಿಸುತ್ತದೆ. ಮೊದಲು ನೀಡಿದ ಜಾಮೀನು (ಸಾಕ್ಷಿ) ಬಿಡಿಸಿ ಆಕಳು ತನ್ನನ್ನು ತಿನ್ನಲು ಕೇಳಿ ಕೊಳ್ಳುತ್ತದೆ. ತಾಯಿ, ಮಕ್ಕಳ ಭಾವಕ್ಕೆ ಮೆಚ್ಚಿದ ಹುಲಿ ಇವರನ್ನು ಬಿಟ್ಟು ಬಿಡುತ್ತದೆ.

'ಅಡವಿನ ಆರತಿ ಮಾಡ್ಯಾಳ ಗೋಪ್ಯವ್ವ
ಗಿಡಗಳ ಕೈ ಪುಜ ಮಾಡ್ಯಾಳ'

ಹುಲಿ, ಸೂರ್ಯ, ಚಂದ್ರ, ಭೂಮಿ. ಶಿವನಿಗೆ ಆರತಿ ಬೆಳಗಿ ಪವಾಡ ಗೆದ್ದು ತನ್ನ ಮನೆಗೆ ಹಿಂತಿರುಗಿದಳೆಂದು ಹೇಳು ವದರೊಂದಿಗೆ ಕಥೆ ಮುಕ್ತಾಯವಾಗುತ್ತದೆ.

**೨. ಗೋಪ್ಯವ್ವನ ಹಾಡು (ಹೆಣ್ಣುಮಕ್ಕಳ ಸುವ್ವಿ ಹಾಡು)**

ಈ ಹಾಡು ನೇರವಾಗಿ ಬಂಜೆತನದ ವರ್ಣನೆಯೊಂದಿಗೆ ಆರಂಭವಾಗುತ್ತದೆ.

'ಎಮ್ಮೆಯ ದನದಾಗ ಗಂಡಾಗಿ ಮೇಯ್ತಿದ್ದ
ಹೋಗು ಬಂಜೆಂದು ಹೊಡೆದಾರs ಸುವ್ವಿ ।
ಆಕಳ ದನದಾಗ ಹೋರ್‍ಯಾಗಿ ಮೇಯ್ತಿದ್ದೆ
ಹೋಗು ಬಂಜೆಂದು ಹೊಡೆದಾರs ಸುವ್ವಿ ।
ಮಕ್ಕಳ ಇದ್ದರs ಹಾಲ್ಗಣಕಿ, ಹುಸರ್ಗಣಕಿ
ಬಂಜೆಯ ಮುಂದೆರಡು ಬಡಿದಂಟು ಸುವ್ವಿ ।
ಸಂಜೇಲಿ ಕಟತಾರ ಮುಂಜೇಲಿ ಹೊಡಿತಾರ
ಬಂಜಿ ಗೋಪೆಂದು ಕರಿತಾರ ಸುವ್ವಿ'

ಬಂಜೆತನದಿಂದ ಮನನೊಂದ ಗೋಪಿ ಶಿವನಲ್ಲಿಗೆ ಹೋಗಿ ಮಕ್ಕಳ ಫಲ ಕೇಳುತ್ತಾಳೆ. ನಿನಗೆ ಈಗಾಗಲೇ ಎರಡು ಹಟ್ಟಿ (ಹನ್ನೆರಡು ವರ್ಷಕ್ಕೊಂದು ಹಟ್ಟಿ)ಗಳು ಆಗಿವೆ. ಮಕ್ಕಳ ಫಲ ಇನ್ನೆಲ್ಲಿ ಎಂದು ಶಿವ ಪ್ರಶ್ನಿಸುತ್ತಾನೆ.

'ಸಂಜೇಲಿ ಹುಟ್ಟಲಿ ಮುಂಜೇಲಿ ಸಾಯಲಿ
ಬಂಜೆಂಬ ಸಲ್ಲು ಬಿಡಸಾಲಿ ಸುವ್ವಿ'

ಎಂದು ಹಟ ಹಿಡಿದು ಮಕ್ಕಳ ಫಲ ಕೇಳಿದಾಗ. ಮಕ್ಕಳಿಂದ ನಿನಗೆ ಗಂಡಾಂತರ ಇದೆಯೆಂದು ಶಿವ ಹೇಳಿ ಅವಳ ಸೊಸಲಿಗೆ ವಿಭೂತಿ ಹಚ್ಚಿ ಆಶೀರ್ವದಿಸಿ ಬೀಳ್ಕೊಡುತ್ತಾನೆ. ಗೋಪಿ ಗರ್ಭ ಧರಿಸುತ್ತಾಳೆ. ಈ ಹಾಡಿನಲ್ಲಿ ಗೋಪ್ಯವ್ವ ಒಂಭತ್ತು ತಿಂಗಳವರೆಗೆ ಬಸಿರು ಹೊತ್ತು ಬಯಕೆ ಕಾಡಿದ ರೀತಿಯ ವರ್ಣನೆ ವಿವರವಾಗಿ ಬಂದಿದೆ. ಸಂಜೆಗೆ ಚಂದ್ರಾಮನಂತ ಮಗನನ್ನು ಪಡೆದು. ಮುಂಜಾನೆ ಗುಡ್ಡಕ್ಕೆ ಮೇಯಲು ಗೋಪ್ಯವ್ವ ಹೋಗುತ್ತಾಳೆ. ಅಲ್ಲಿ ಕಂಟಿಯಲ್ಲಿ ಅಡಗಿ ಕುಳಿತ ಹುಲಿ ಹಾರಿಬಂದು ತಿನ್ನಬಯಸುತ್ತದೆ. ಆಗ ಗೋಪ್ಯವ್ವ ಬಹಳ ದಿನಗಳ ನಂತರ ಒಂದು ಕಂದನನ್ನು ಪಡೆದಿದ್ದೇನೆ. ಹಾಲು ಕೊಟ್ಟು ಬರುವೆನೆಂದು ಹುಲಿಗೆ ಪರಿ ಪರಿಯಿಂದ ಕೇಳಿಕೊಳ್ಳುತ್ತಾಳೆ. ನೀನು ಹಿಂತಿರುಗಿ ಬರಲಿಕ್ಕೆ ಯಾರ ಸಾಕ್ಷಿ ಕೊಡುವಿ ಎಂದು ಕೇಳಿದಾಗ

'ಹಸಿರು ಹುಲ್ಲಿನಾಣೆ ನೀರು ಜಬ್ಬಲದಾಣೆ
ಭೂಮೆವ್ವನಾಣೆ ಬರತೀನಿ ಸುವ್ವಿ'

ಎಂದು ವಚನ ಕೊಡುತ್ತಾಳೆ. ಮನೆಗೆ ಬಂದು ತನ್ನ ಒಡನಾಡಿ ಹಸುಗಳಿಗೆ ಕರುವನ್ನು ನೋಡಿಕೊಳ್ಳಲು ಕೇಳಿ ಕೊಳ್ಳುತ್ತದೆ. ಹಾಗೂ ಕರುವಿಗೆ ಕೆಲವು ಉಪದೇಶದ ಮಾತು ಹೇಳಿ ಹೊರಡಲು ಸಿದ್ಧವಾಗುತ್ತದೆ. ಚೆನ್ನಬಸವನೆಂಬ ಆದರ ಕರು ತಾನು ಹಟ ಮಾಡಿ ತಾಯಿಯನ್ನು ಹಿಂಬಾಲಿಸುತ್ತದೆ. ಕರು ಹಾಗೂ ತಾಯಿ ಹುಲಿ ಇದ್ದಲ್ಲಿಗೆ ಬರುತ್ತವೆ. 'ನನ್ನ ತಾಯಿಯನ್ನು ತಿಂದು ನನ್ನನ್ನು ಉಳಿಸಿದರೆ ನಾನು ಪರದೇಶಿ ಯಾಗುವೆ ನನ್ನನ್ನೇ ತಿನ್ನು', ಎಂದು ಕರು ಕೇಳಿಕೊಂಡರೆ. ಆಕಳು, 'ನನ್ನನ್ನು ಬಿಟ್ಟು ಮಗುವನ್ನು ತಿಂದರೆ ಮತ್ತೆ ನಾನು ಬಂಜೆಯಾಗಲಾರೆ ನನ್ನನ್ನೇ ತಿನ್ನು'. ಎಂದು ಕೇಳಿಕೊಳ್ಳುತ್ತದೆ. ಆಗ ಹುಲಿ "ನಿನ್ನಂಥ ಗೋವಿಯನ್ನು ಎಲ್ಲಿಯೂ ಕಾಣಲಿಲ್ಲ ಕಂದನಿಗೆ ಹಾಲು ಕೊಟ್ಟು ಬದುಕಿಕೊ" ಎಂದು ಹೇಳಿ ಬಿಡು ತ್ತದೆ. ಮೊದಲು ನೀಡಿದ ಆಣೆಗೆ ಒಳಿತು ಹೇಳಿಸಿಕೊಂಡು ಹಿಂದಿರುಗುತ್ತದೆ.

'ಕಾಲನ್ನ ಕೆಮರತ ಕೋಡನ್ನ ನಲಿದಾಡುತ
ಬಂದಾರ ತಮ್ಮರಮನೆಗೆ ಸುವ್ವಿ
ಇಲ್ಲಿಗೆ ಹರ ಹರ ಇಲ್ಲಿಗೆ ಶಿವ ಶಿವ
ಇಲ್ಲಿಗೆ ಗೋವಮ್ಮನ ಪದ ಮುಗಿದಿತ ಸುವ್ವಿ

ಎಂಬ ಸಾಲಿನೊಂದಿಗೆ ಈ ಗೀತ ಕಥಾನಕ ಮುಕ್ತಾಯ ಗೊಳ್ಳುತ್ತದೆ.

## ೩. ಗೋಪಿಯ ಪದ (ಕೋಲಾಟದ ಪದ)

ಗೋವಿನ ಹಾಡಿನ ರಚನೆಗೆ ನೇರ ಹೋಲಿಕೆಯಿರುವ ಹಾಡು ಇದಾಗಿದೆ. ಇಲ್ಲಿ ಆಕಳು ಅಡವಿಯಲ್ಲಿರುವ ಹುಲಿಯನ್ನು ಕಂಡ ವಿಷಯದಿಂದಲೇ ಕಥೆ ಪ್ರಾರಂಭವಾಗುತ್ತದೆ.

'ಅಡಿವ್ಯಾಗ ಹುಲಿರಾಜ ಮಲಿಗ್ಯಾನ ಇನ್ನs
ಅಡಿವಿಗೆ ಗೋಪ್ಯವ್ವ ಮೇಯಲಿಕ್ಕೆ ದನs
ಕೋಲು ಕೋಲs ಮುತ್ತಿನ ಕೋಲs'

ಹುಲಿ ತಿನ್ನುತ್ತೇನೆ ಎಂದು ಹೇಳಿದಾಗ ಮಗನಿಗೆ ಹಾಲು ಕೊಟ್ಟು ಬರುವೆನೆಂದು 'ಕೈ ಭಾಷೆ' ಕೊಟ್ಟು ಮನೆಗೆ ಹಿಂದಿರುಗುತ್ತದೆ. ಅವಸರದಿಂದ ಮಗನಿಗೆ ಹಾಲು ಕೊಡುವಾಗ 'ಏಕವ್ವ ಇಷ್ಟು ಅವಸರ' ಎಂದು ಕರು ಕೇಳುತ್ತದೆ. ಹುಲಿರಾಜನಿಗೆ ಭಾಷೆ ಕೊಟ್ಟು ಬಂದ ವಿಷಯ ಕರುವಿಗೆ ಹೇಳುತ್ತದೆ.

'ಹುಲಿರಾಜನಿಗೆ ಭಾಷೆ ಕೊಟ್ಟು ಬಂದೆ ನಾನs
ನಡಿಯಮ್ಮ ನಿನ್ನ ಹಿಂದೆ ಬರತೀನಿ ನಾನs
ಕೋಲು ಕೋಲs, ಮುತ್ತಿನ ಕೋಲs'

ಕರು ಹಾಗೂ ಆಕಳು ಹುಲಿಯ ಹತ್ತಿರ ಬಂದು ತಿನ್ನಲು ಕೇಳಿಕೊಂಡಾಗ

ಕೊಟ್ಟ ಭಾಷೆಗೆ ಬಂದಿದೀಯ ಮುಟ್ಟುದಿಲ್ಲ ನಿಮ್ಮನ್ನ
ಸತ್ಯುಳ್ಳ ವಚನಕ್ಕೆ ಮೆಚ್ಚುವೆ ನಾನ
ಕೋಲು ಕೋಲs ಮುತ್ತಿನ ಕೋಲು ಕೋಲ

ಸತ್ಯವಚನಕ್ಕೆ ಮೆಚ್ಚುವೆನು. ನಿಮ್ಮನ್ನು ತಿನ್ನುವದಿಲ್ಲ
'ಶಿವನಲ್ಲಿ' ಹೋಗಿ ಬೇಡುವೆ ಮಾನ ಎಂದು ಹುಲಿ ಹೇಳಿ

..................................

ಎತ್ತರಲಿ ಹೋಗಿ ಹುಲಿ ಕೊಟ್ಟಿತು ಪ್ರಾಣಽ

ಹೀಗೆ ಹುಲಿಯ ಸಾವಿನೊಂದಿಗೆ ಹಾಡು ಮುಗಿಯುತ್ತದೆ.

## ೪. ಚಿಗರಿ ಪದಾ (ರಿವಾಯತ್)

ಎಲ್ಲಣ್ಣನೆಂಬ ಕವಿ ಈ ಹಾಡು ಹೇಳಿದ್ದಾನೆ. ಬೇಟೆಗಾರನ ಕೈಯಲ್ಲಿ ಒಂದು ಚಿಗರಿ ಸೆರೆ ಸಿಗುತ್ತದೆ. ಅಲ್ಲಿ ಇದ್ದ ನಬಿಸಾಹೇಬ ಶರಣರಿಗೆ 'ನೀವು ಜಾಮೀನಾಗಿ ಬಿಡಿಸಿರಿ, ನನ್ನ ಎರಡು ಮಕ್ಕಳಿಗೆ ಹಾಲು ಕುಡಿಸಿ 'ರಿಣಾ ಹರಕಂಡು ಬರುವೆ' ಎಂದು ಚಿಗರಿ ಕೇಳಿಕೊಳ್ಳುತ್ತದೆ. ಚಿಗರಿ ಮರುಗುವದನ್ನು ನೋಡಲಾಗದೆ ನಬಿಸಾಹೇಬರು ಕರುಣೆಗೊಂಡು, ಜಾಮೀನಾಗಿ ಚಿಗರಿಯ ಸೆರೆ ಬಿಡಿಸುತ್ತಾರೆ. ಅವಸರದಿಂದ ಮನೆಗೆ ಬಂದು ತನ್ನ ಮಕ್ಕಳನ್ನು ಕರೆದು ಹಾಲು ಕೊಡುತ್ತದೆ. ಆ ಹಾಲು ವಿಷ ಹತ್ತಲು ಮಕ್ಕಳು ಹೀಗೇಕೆ ಎಂದು ಕೇಳುತ್ತವೆ. ಬೇಟೆಗಾರ ಹಿಡಿದ ವಿಷಯ, ನಬಿಸಾಹೇಬ ಶರಣರು ಜಾಮೀನಾಗಿ ಬಿಡಿಸಿದ ವಿಷಯವನ್ನು ತಾಯಿ ಚಿಗರಿ ಮರಿಗಳಿಗೆ ಹೇಳುತ್ತದೆ. ನಿನ್ನನ್ನು ಬಿಟ್ಟು ಅರೆಗಳಿಗೆ ಇರಲಾರೆವು,

'ನಾವಿದ್ದು ಫಲವೇನು ನಡಿಯ ಹೋಗೋಣ
ತಾಯಿ ಮಕ್ಕಳು ಕೂಡಿ ಹಿಡಿದಾವ್ರ ಹಾದಿಯನ
ಹೋಗಿ ನಿಂತ ನಬಿಸಾಹೇಬಗ ಮಾಡ್ಯಾವ್ರ ಶರಣ
ಸತ್ಯದ ತಾಯಿ ಮಕ್ಕಳನಾಽ'

ತಾಯಿಯೊಂದಿಗೆ ಮಕ್ಕಳು ಬೇಟೆಗಾರನಲ್ಲಿಗೆ ಹೋಗಿ ಕೊಟ್ಟ ಆಣೆಗೆ ಒಳಿತು ಹೇಳಿಸಿ ಕೊಳ್ಳುತ್ತವೆ. 'ಮುದುಕಿ ಮಾಂಸ ರುಚಿಯಲ್ಲ, ಹಾಲು ಕುಡಿದು ಬೆಳೆದ ನಮ್ಮ ಎಳೆ ಮಾಂಸ ತಿನ್ನು' ಎಂದು ಮರಿ ಹೇಳುತ್ತವೆ. ಕರುಣೆಗೊಂಡ ಬೇಟೆಗಾರ ತಾಯಿ ಮಕ್ಕಳನ್ನು ಬಿಡುತ್ತಾನೆ. ಅವರು ಮುಂದೆ ಮಕ್ಕಾಮದಿನಾಕ್ಕೆ ಹೋಗಿ ಬಂದರೆಂದು ಹೇಳುವದರ ಜೊತೆಗೆ ಈ ಕಥಾನಕ ಮುಗಿಯುತ್ತದೆ.

## ೫. ಚಿಗರಿ ಭಯಾನ್ (ರಿವಾಯತ್)

ಕಾಡಿನಲ್ಲಿ ಒಂದು ಚಿಗರಿ ಮರಿ ಹಾಕಿದೆ. ಅದಕ್ಕೆ ಬಾಯಾರಿಕೆಯಾಗಿ ನೀರು ಹುಡುಕುತ್ತ ಹೋಗುತ್ತದೆ. ಅಲ್ಲಿ ಬೇಟೆಯಾಡುವ ಅರಸನೊಬ್ಬ ಗುರಿ ಇಟ್ಟು ಬಾಣ ಎತ್ತಿದ್ದನ್ನು ನೋಡಿ ಮನೆಯಲ್ಲಿ ಕಂದಮ್ಮಗಳನ್ನು ಬಿಟ್ಟು ಬಂದಿದ್ದೇನೆ.

> 'ಮನೆಗ್ಹೋಗಿ ಮಲಿಕೊಟ್ಟು ಬರುತ್ತೇನೋ ನಾನಯಿ
> ಬಲಗೈ ಭಾಷೆಯು ಕೊಟ್ಟು ಹಿಡಿದೈತಿ ಹಾದಿಯನಾಯಿ

ಮನೆಗೆ ಹೋಗಿ ತಾನು ಗುಂಡಿನ ಬಾಯಿಗೆ ಗುರಿಯಾದ ಹಾಗೂ ಭಾಷೆ ಕೊಟ್ಟು ಬಂದ ವಿಷಯ ಹೇಳುತ್ತ ಮಕ್ಕಳಿಗೆ ಹಾಲುಣಿಸು ತ್ತದೆ. ಗಂಡು ಚಿಗರಿ ಹಾಗೂ ಎರಡು ಮರಿ, ಬೇಟೆಗಾರ ಅರಸನಲ್ಲಿಗೆ ಬರುತ್ತವೆ. 'ನಮ್ಮ ತಂದೆ ತಾಯಿ ಬಿಟ್ಟುಬಿಡಿರಿ. ನಮ್ಮನ್ನು ಕೊಲ್ಲಿರಿ' ಎಂದು ಮರಿಗಳು ಬೇಡಿಕೊಂಡಾಗ ಬೇಟೆ ಗಾರ ಅರಸ ಅವುಗಳನ್ನು ಬಿಡುತ್ತಾನೆ. ಸರ್ವಜನ ಸಲುವ್ಯಾನ, ಸತ್ಯಭಗವಾನ್, ಎಂದು ಹೇಳುವದರ ಜೊತೆಗೆ ಕಥೆ ಮುಗಿಯು ತ್ತದೆ.

## ೬. ಮಾರಿಯಾಕ ಮಾಡಿದಿ ಸಣ್ಣ?

ಈ ಹಾಡಿನ ಕೊನೆಗೆ ಬಾದಾಮಿ (ವಿಜಾಪುರ ಜಿಲ್ಲೆ) ದಸ್ತಗೀರ್ ಎಂಬುವರ ಹೆಸರು ಬರುತ್ತದೆ. ಅವರು ಈ ಹಾಡನ್ನು ರಚಿಸಿರಬಹುದು ಇಲ್ಲವೆ ಯಾರಿಂದಲಾದರೂ ಕಲಿತಿರಬಹುದು ಏಕೆಂದರೆ ಸಾಮಾನ್ಯವಾಗಿ ಜಾನಪದ ಹಾಡುಗಳಲ್ಲಿ ಕೊನೆಗೆ ಬರುವ ಹೆಸರುಗಳು ಹಾಡಿದವರ ಅಥವಾ ಅವರಿಗೆ ಕಲಿಸಿದ ಗುರುಗಳ ಹೆಸರು ಇರುತ್ತವೆ.

ಈ ಹಾಡು ಇತರ ಚಿಗರಿ ಹಾಡಿನಂತಿರದೆ ಪೂರ್ಣ ಪ್ರಮಾಣದಲ್ಲಿದ್ದು ಸಂಪೂರ್ಣ ಕಥಾ ಸಾರಾಂಶ ಒಳಗೊಂಡಿದೆ. ನಿತ್ಯ ಬೇಟೆಮಾಡುವ ಬೇಟೆಗಾರನೊಬ್ಬನಿಗೆ. ಒಂದು ದಿನ ಯಾವುದೇ ಬೇಟೆ ಸಿಗಲಿಲ್ಲ. (ಗೋವಿನ ಹಾಡಿನ ಹಸಿದ ಹುಲಿಯನ್ನು ಇಲ್ಲಿ ಸ್ಮರಿಸಬಹುದು). ಏನು ಮಾಡಲಿ ಭಗವಾನ್ ಎಂದು ದೇವರನ್ನು ಸ್ಮರಿಸುತ್ತಾನೆ. ಅಷ್ಟರಲ್ಲಿ ಚಿಗರಿಯೊಂದು ಕಾಣಿಸಿಕೊಳ್ಳುತ್ತದೆ. ಬಾಣ ಹೊಡೆಯಲು ಸಿದ್ಧನಾಗುತ್ತಾನೆ. ಆಗ ಚಿಗರಿ ಅವಸರ ಮಾಡಬೇಡಿ ತಡೆಯಿರಿ ಸ್ವಲ್ಪ ಎಂದು ಕೇಳಿಕೊಂಡು. ಮನೆಯಲ್ಲಿ ಮಕ್ಕಳನ್ನು ಬಿಟ್ಟು ಬಂದಿದ್ದೇನೆ. ಹಾಲುಣಿಸಿ ಬರುವೆನೆಂದು. ಅಪ್ಪಣೆಗಾಗಿ ಕೇಳುತ್ತದೆ. ನೀನು ಸುಳ್ಳು ಹೇಳುವೆಯೆಂದು ಚಿಗರಿ ಹಿಡಿದುಕೊಂಡು ಮನೆ ದಾರಿಯನ್ನು ಹಿಡಿಯುತ್ತಾನೆ. ಹಾದಿಯಲ್ಲಿ ನಬಿಸಾಹೇಬ ಶರಣರು ಎದುರು ಬರುತ್ತಾರೆ. ಚಿಗರಿ ವಂದಿಸಿ ಅವರ ಪಾದಕ್ಕೆರಗಿ. 'ಮರಿಗಳಿಗೆ ಹಾಲುಣಿಸಿ ಈಗಿಂದೀಗಲೆ ಬರುವೆ. ಬಿಡಿಸಿರಿ ಈ ಕ್ಷಣ' ಎಂದು ಬೇಡಿಕೊಳ್ಳುತ್ತದೆ. ಬೇಟೆಗಾರನು

ನೀವು ಜಾಮೀನಾದರೆ ಬಿಡುವೆನೆಂದು ಹೇಳಿದಾಗ, ನಬಿ ಸಾಹೇಬರು ಜಾಮೀನಾಗಿ ಚಿಗರಿಯನ್ನು ಬಿಡಿಸುತ್ತಾರೆ. ಚಿಗರಿ ಮನೆ ಹಾದಿ ಹಿಡಿಯುತ್ತದೆ.

"ಚಿಗರಿ ಹಿಡಿದಿತು ದಾರಿಯನು
ಮರಿಗಳು ಹುಡುಕುತಿದ್ವು ತಾಯಿಯನು
ಮರಿಗಳು ಅಂದವು ತಾಯಿಗಿನಾ
ಮಾರಿಯಾಕ ಮಾಡಿದಿ ಸಣ್ಣಾ
ನೀ ಹೇಳೋತನಕ ನಾವಿನ್ನ
ಕುಡಿಯೊದಿಲ್ಲೊ ಮಲಿ ಹಾಲಿನ್ನ
ಆ ಕ್ಷಣ ಹೇಳಿತೋ ಚಿಗರಿನ್ನಾ
ತಾ ಶರಣಗ ಕೊಟ್ಟ ಭಾಷೆಯನಾ
ಮರಿಗಳು ಅಂದವ್ರೋ ತಾಯಿಗಿನ್ನಾ
ಇದಕ್ಯಾಕ ಭಯಪಡುತಿದಿ ನೀನಾ
ಶರಣರ ಮಂದಿಗೆ ಹೋಗಿ ನಾವ್
ಎಲ್ಲಿರು ಕೊಡುವನಾ ಪ್ರಾಣವನಾ"

ಇತ್ತ ಚಿಗರಿ ಬರಲಿಲ್ಲವೆಂದು ಬೇಟೆಗಾರ ನಬಿಸಾಹೇಬರ ಮೇಲೆ ಕ್ರೋಧಗೊಂಡಿದ್ದನು. ಚಿಗರಿ ತನ್ನ ಮರಿಗಳೊಂದಿಗ ಬಂದಾಕ್ಷಣ ಆವನು ಪಶ್ಚಾತ್ತಾಪ ಹೊಂದಿ ಶರಣರ ಪಾದಗಳಿಗೆ ಬಿಲ್ಲು ಬಾಣಗಳನ್ನು ಒಪ್ಪಿಸುತ್ತಾನೆ. ಹಾಗೂ ಚಿಗರಿಯನ್ನು ಬಿಡುತ್ತಾನೆ. ಹರುಷದಿಂದ ಚಿಗರಿ ಹಾಗೂ ಮರಿಗಳು ನಬಿಸಾಹೇಬ ಶರಣರ ಪಾದಗಳಿಗೆ ವಂದಿಸಿ ಮನೆಗೆ ಮರಳುತ್ತವೆ.

## ೭. ಚಿಗರಿ ಲಾವಣಿ

ಎಲ್ಲ ಚಿಗರಿ ಹಾಡುಗಳಲ್ಲಿ ಇದು ವಿಶಿಷ್ಟವಾಗಿದೆ. ಘಟನೆಗಳ ನೇರ ವರ್ಣನೆಯಲ್ಲದೆ ಸ್ಥಿತಿ ಸಂದರ್ಭಗಳ ವಿವರಣೆಯನ್ನೂ ಇಲ್ಲಿ ಕಾಣಬಹುದು. ಬೇಟೆಯಾಡುವ ಅರಸನ ಹವ್ಯಾಸದ ವರ್ಣನೆಯೊಂದಿಗೆ ಈ ಹಾಡು ಪ್ರಾರಂಭವಾಗುತ್ತದೆ.

ಪ್ರತಿ ದಿನ ಅರಣ್ಯಕ್ಕೆ ಹೋಗಿ ಬೇಟೆಯಾಡಿ 'ಸೇರ'ಚಿಗರಿಯ ಮಾಂಸ ತಿನ್ನುವದು ಅರಸ ಬೇಟೆಗಾರನ ರೂಢಿಯಾಗಿತ್ತು. ಒಮ್ಮೆ ಚೈತ್ರ ಮಾಸದ ಗುರುವಾರ ಏಕಾದಸಿಯೆಂದು ಮದ್ದು ಗುಂಡು ತೆಗೆದುಕೊಂಡ ಊರ ಅಗಸಿ ದಾಟಿ ಅರಣ್ಯ ಮಾರ್ಗ ಹಿಡಿದು ಅರಸ ಹೊರಟಿದ್ದಾನೆ. ಅಲ್ಲಿ ಜರುಗುವ ಶಕುನಗಳ ವರ್ಣನೆಯನ್ನು ಹಾಡಿನಲ್ಲಿ ಕಾಣಬಹುದು.

ಶಾಂತವಾಗಿ ಹರಿಯುವ ಹಳ್ಳದ ದಂಡೆಯ ಮೇಲೆ ಗಿಡ ಮರಗಳ ಪೊದೆಯ ಮರೆಯಲ್ಲಿ ಅರಸ ಬೇಟೆಗಾಗಿ ಸಜ್ಜಾಗಿ ಕುಳಿತಿದ್ದಾನೆ. ಅದೇ ಅರಣ್ಯದಲ್ಲಿ ಚಿಗರಿಯೊಂದು ಮರಿ ಹಾಕಿ. ಹೆರಿಗೆ ನೋವಿನಿಂದ ನೀರಡಿಸಿ ತನ್ನ ಮರಿಗಳನ್ನು ಬಿಟ್ಟು ನೀರು ಹುಡುಕುತ್ತಾ ಹಳ್ಳಕ್ಕೆ ಬರುತ್ತದೆ. ಚಿಗರಿಯನ್ನು ನೋಡಿದ ಅರಸ ಬೇಟೆ ಹೊಡೆಯಲು ಸಜ್ಜಾಗುತ್ತಾನೆ. ಅದರ ಸುಳಿವು ಚಿಗರಿಗೆ ತಿಳಿಯುತ್ತದೆ. ಅಷ್ಟರಲ್ಲಿ ಬಾಣ ಹೊಡೆಯುವವರಿಂದ ಮರದ ಮೇಲಿದ್ದ ಕಪೋತಪಕ್ಷಿ ಹಾರಿ ಹೋಗುತ್ತದೆ. ದೇವರೆ ಇಂತಹ ಜೀವರಾಶಿಗಳನ್ನು ರಕ್ಷಿಸುವನೆಂದು ಚಿಗರಿ ಹೇಳುತ್ತದೆ.

ಮರಿಗಳ ಮಾರಿ ನೋಡದೆ ಹೆರಿಗೆ ನೋವಿನಿಂದ ನರಳಿ ಬಂದಿದ್ದೇನೆ. ಎಳೆ ಮರಿಗಳಿಗೆ ಹಾಲು ಕೊಟ್ಟು ಬರುವೆನೆಂದು ಚಿಗರಿ ಅರಸನ ಹತ್ತಿರ ಬಂದು ಕೇಳಿಕೊಳ್ಳುತ್ತದೆ. ಆಗ ಅರಸನು ಭಾಷೆ (ಆಣೆ) ಪಡೆದುಕೊಂಡು ಬಿಡುತ್ತಾನೆ. ಈ ಹಾಡಿನಲ್ಲಿ ಈ 'ಆಣೆ'ಯು ಸಾಧನಗಳು ವಿಶಿಷ್ಟವಾಗಿದೆ.

"ಆವಾಗ ಚಿಗರಿ ಕೊಡತತಿ ಆಣೆ
ಈ ತ್ರಿಲೋಕದೊಡೆಯ ಮುಕ್ಕಣ್ಣ ಹರನಾಣೆ
ನೀರಿನೊಳಗ ಮುಳುಗಿ ಬೆನ್ನೀಲಿ ತಾಳಿದವನಾಣೆ
ಕೋರಿಲೆ ಮಣ್ಣ ಚಿಮ್ಮಿ ಕಂಬದೊಳಗೆ ಮೂಡಿದವನಾಣೆ
ಅವನ ಭಕ್ತಿಲೆ ಬಾಗಿಲ ಕಾಯ್ದು ಕೊಡ್ಲಿ ಹಿಡಿದವನಾಣೆ
ತರ್ದಾ ಸೇತು ಕಟ್ಟಿ ಆಕಳು ಕಟ್ಟಿದವನಾಣೆ
ಪುಂಡಲೀಕ ವರದ ವಿಠಲನಾಣೆ
ಈ ಆಕಾಶ ಭೂಮಿ ಸಾಕ್ಷಿ
ಅರಸ ಹೋಗೋದಿಲ್ಲ ತಿಳಿ ಮನಕ"

ಇಷ್ಟೆಲ್ಲ ದೇವರ ಆಣೆ ಮಾಡಿದ ಚಿಗರಿಯನ್ನು ಅರಸ ಮರಿಗಳಿಗೆ ಹಾಲು ಕೊಟ್ಟು ಬರಲು ಬಿಡುತ್ತಾನೆ. ದೇವರೆ ತನ್ನನ್ನು ರಕ್ಷಿಸಿದ ಎಂದು ನಂಬಿಕೊಂಡು ಚಿಗರಿ ತನ್ನ ಮರಿಗಳನ್ನು ಹುಡುಕುತ್ತಾ ಹೋಗುತ್ತದೆ. ಇತ್ತ ಮರಿಗಳನ್ನು ಕಾಯುತ್ತಾ ಕುಳಿತ ಗಂಡು ಚಿಗರಿ, ಇಷ್ಟೇಕೆ ತಡ? ಎಲ್ಲಿಗೆ ಹೋಗಿದ್ದೆ? ಎಂದು ಕೇಳುತ್ತದೆ. ದುಃಖ ಉಮ್ಮಳಿಸಿ ಹೆಣ್ಣು ಚಿಗರಿ ನಡೆದ ಘಟನೆಯನ್ನು ಹೇಳಿ 'ನಮ್ಮ ಋಣಾನುಬಂಧ

ಇಲ್ಲಿಗೆ ಮುಗಿಯಿತು, ಮಕ್ಕಳನ್ನು ಜೋಪಾನಿಸುವದು ನಿನ್ನ ಹೊಣೆ', ಎಂದು ಹೇಳುತ್ತದೆ. ವಿಷಯ ತಿಳಿದ ಅವೆಲ್ಲವೂ ಕೂಡಿಕೊಂಡು ಬೇಟೆಗಾರ ಅರಸನೆಡೆಗೆ ಒಟ್ಟಿಗೆ ಹೋಗುತ್ತವೆ.

"ಅವೆಲ್ಲಿ ಹೋದವು ಅರಸ ಇದ್ದ ಸಜ್ಜನಾ
ಅಂವಾಲಗು ಹಿಡಿದೊ ತನ್ನ ಚಿಗರಿಯು ಮೊನಾ
ಆ ಚಿಗುರಿ ಅರಸಗೆ ಅಂತತಿ ಮುಟ್ಟಿತು ನಿನ್ನ ವಚನ
ಇನ್ನ ಯಾಕ ಅನುಮಾನ ತಗೋರಿ ನನ್ನ ಪ್ರಾಣ

ಗಂಡು ಚಿಗರಿ 'ಕೂಸುಗಳು ಮಲಿ ಬೇಡಿ ಅಳುತ್ತಾವ' ಎಂದು ತಾನೇ ಬಲಿದಾನಕ್ಕೆ ಮುಂದಾಗುತ್ತದೆ. ಆಗ ಹೆಣ್ಣು ಚಿಗರಿ 'ಮುತ್ತೈದೆತನ ಹೋದರೆ ರಂಡಿಯಾಗಿ ಬದುಕಲಾರೆ' ಎಂದು ಹೇಳಿ ತನ್ನ ಬಲಿದಾನಕ್ಕೆ ಮುಂದಾಗುತ್ತದೆ. ಅಷ್ಟರಲ್ಲಿ ಮರಿ ಚಿಗರಿಗಳು ಕೋಟ್ಯಾಂತರ ಪುಣ್ಯದಲ್ಲಿ ಪಿತೃ ಸೇವೆಯು ಪುಣ್ಯ ಹೆಚ್ಚಿನದು ಆದ್ದರಿಂದ ತಮ್ಮನ್ನು ಬಲಿ ತೆಗೆದುಕೊಳ್ಳಲು ಅವು ಕೇಳಿಕೊಳ್ಳುತ್ತವೆ.

ಅರಸನಲ್ಲಿ ಅಂತಃಕರಣ ಉದಯಿಸಿ ಚಿಗರಿಗಳಿಗೆ ಹೋಗಲು ಅಪ್ಪಣೆ ಕೊಡುತ್ತಾನೆ. ಆಯುಧಗಳನ್ನು ಎಸೆದು, ಹಳ್ಳದಲ್ಲಿ ಸ್ನಾನಮಾಡಿ ವಿಷ್ಣು ಸ್ಮರಣೆಯೊಂದಿಗೆ ಸಂತನಾಗುತ್ತಾನೆ. ವಿಠೋಬಾ ಅವನಿಗೆ ದರ್ಶನ ನೀಡಿ ಮೋಕ್ಷ ಕಲ್ಪಿಸಿದನು ಎಂದು ಹೇಳುವವರ ಜೊತೆಗೆ ಹಾಡು ಮುಕ್ತಾಯಗೊಳ್ಳುತ್ತದೆ. ಮಲ್ಲೇಶಿ ಎಂಬುವವರ ಹೆಸರು ಈ ಹಾಡಿನ ಕೊನೆಗೆ ಬರುತ್ತದೆ.

## ೮. ಚಿಗರಿ ಹಾಡು (ಮೊಹರಂ ಪದ)

ಇತರ ಚಿಗರಿ ಹಾಡುಗಳಿಗೆ ಸಮೀಪದ ಅರ್ಥವಿನ್ಯಾಸವನ್ನು ಈ ಹಾಡು ಹೊಂದಿದೆ. ಇಲ್ಲಿ ಬೇಟೆಗಾರ ಬಡವನಿದ್ದಾನೆ. ಉದರ ಪೋಷಣೆಗೆ ನಿತ್ಯ ಬೇಟೆಯಾಡಿ ಬದುಕುತ್ತಿದ್ದಾನೆ. ಒಂದು ದಿನ ಕಾಡಿನಲ್ಲಿ ಬಲೆ ಹಾಕಿ ಕುಳಿತಾಗ ಎಳೆ ಹುಲ್ಲು ಮೇಯಲು ಬಂದ ಚಿಗರಿ ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ. ತನ್ನ ಮರಿಗಳಿಗೆ ಹಾಲು ಕೊಟ್ಟು ಬರುವದಾಗಿ ಎಷ್ಟೇ ದಯನೀಯವಾಗಿ ಹೇಳಿದರೂ ಬೇಟೆಗಾರ ಬಿಡುವದಿಲ್ಲ. ದಾರಿಯಲ್ಲಿ ಬಂದ ನಬಿಸಾಹೇಬ ಶರಣರು ಜಾಮೀನಾಗಿ ಬಿಡಿಸುತ್ತಾರೆ. ಹಾಲು ಕೊಡುವಾಗ ದುಃಖಿಸಿದ ತಾಯಿಯನ್ನು ಮರಿಗಳು ಅಳುವಿನ ಕಾರಣ ಕೇಳುತ್ತವೆ. ನಡೆದ ಘಟನೆಯನ್ನು ಚಿಗರಿ ವಿವರಿಸುತ್ತದೆ.

"ತಾಯಿಯು ಕಳಕೊಂಡು ಪರದೇಶಿಗಳಾಗಿ
ಇರುವದು ಯಾತಕ
ನಮ್ಮನ್ಯಾರು ಕರಿತಾರ ಹಂತ್ಯಾಕ
ಲಗುಮಾಡಿ ಹೊಂಟಾವ್ರ ಆ ಕ್ಷಣಕ್ಕ
ಹಾ ಹಾ ಬಿದ್ದವರಿ ಮಣಕ"

ನಬಿಸಾಹೇಬರು ವಾಪಸು ಬಂದ ಚಿಗರಿಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಬೇಟೆಗಾರನಿಗೆ ಹೇಳಿದಾಗ ಕರುಣೆಗೊಂಡು ಅವುಗಳನ್ನು ಬಿಟ್ಟುಬಿಡುತ್ತಾನೆ.

## ೯. ಚಿಗರಿ ಕರ್ಬಲ್ ಹಾಡು

ಎಮ್. ಅಕ್ಬರ್ ಅಲಿ ಅವರು ಸಂಗ್ರಹಿಸಿದ ಈ ಹಾಡು ಕೂಡ ಇತರ ಚಿಗರಿ ಹಾಡಿನ ತಾತ್ಪರ್ಯವನ್ನೇ ಹೊಂದಿದೆ. ಬೇಟೆಗಾರನೊಬ್ಬ ಬಲೆ ಹಾಕಿ ಹಿಡಿದ ಚಿಗರಿಯನ್ನು ಕೊಲ್ಲಬೇಕೆಂದು ಚೂರಿ ಎತ್ತುತ್ತಾನೆ. ಆಗ ಚಿಗರಿ ಆತನಲ್ಲಿ ಬೇಡಿಕೊಳ್ಳುತ್ತದೆ—

"ಬ್ಯಾಟಗಾರ ಈದು ನಾನು ಮೂರು ದಿನ
ಸಣ್ಣ ಮರಿ ಎರಡವನ ತೆರೆದಿಲ್ಲ ಕಣ್ಣ
ಮೊಲೆ ತೊರೆದು ಹಾಲು ಹರಿದು ಹೋಗುತ್ತಾವ ಅಣ್ಣ"

ಕಲ್ಲೆದೆಯ ಬೇಟೆಗಾರನ ಮನ ಕರಗುವದಿಲ್ಲ. ಯಾರಾದರೂ ಜಾಮೀನ ಕೇಳುತ್ತಾನೆ. ಅಷ್ಟರಲ್ಲಿ ಪೈಗಂಬರರ ಆಗಮನವಾಗುತ್ತದೆ. ಅವರು ಜಾಮೀನಾಗಿ ಚಿಗರಿಯನ್ನು ಬಿಡಿಸುತ್ತಾರೆ. ತಾಯಿಯ ಹಾಲು ನಿಷ ದಕ್ಕಿದಾಗ ಮರಿಗಳು ತಾಯಿಯನ್ನು ಕೇಳುತ್ತವೆ. ತಾಯಿ ನಡೆದ ಘಟನೆಗಳನ್ನು ವಿವರಿಸುತ್ತಾಳೆ. ಅಷ್ಟರಲ್ಲಿ ಗಂಡು ಚಿಗರಿ ಬರುತ್ತದೆ. ಎಲ್ಲವೂ ಕೂಡಿ ಕೊಂಡು ಆತ್ಮಾರ್ಪಣೆಗೆ ಸಿದ್ಧವಾಗಿ ಹೊರಡುತ್ತವೆ.

ಬಲಿದಾನಕ್ಕಾಗಿ ಅವುಗಳಲ್ಲಿ ಸ್ಪರ್ಧೆ ನಡೆಯುತ್ತವೆ.

"ಕೊಟ್ಟೀನಿ ವಚನ ಹೆಣ್ಣು ಚಿಗರಿ ಅಂತೈತೊ
ಕೊಯ್ಯೊ ನನ್ನ
ಗಂಡೆರಳೆ ಅಡ್ಡ ಬಿತ್ತೊ: ಬ್ಯಾಡ ಆಕೀನ
...............ಮಕ್ಕಳ ಸಲುವಾಕೀನ
...............ಮುತ್ತೈದೆ ಸಾಗ ಕೊಯ್ಯೋ ನನ್ನ
ಗಂಡ ಸತ್ತ ಎನ್ನಾಳೆ ಬರುವಾನ [illegible]"

ಅಷ್ಟರಲ್ಲಿ ನಂ ಟಗರುಗಳು ತಾವು ಬಲಿದಾನಕ್ಕೆ ಮುಂದಾಗುತ್ತವೆ, ಬೇಟೆಗಾರನ ಮನಃಕರಗಿ ಅವುಗಳನ್ನು ಬಿಟ್ಟು ಬಿಡುತ್ತಾನೆ.

## ೧೦. ಆಕಳು ಹಾಡು

ಪುಣ್ಯಕೋಟಿ ಎಂಬ ಹೆಸರಿನ ಬದಲಾಗಿ ಈ ಹಾಡಿನಲ್ಲಿ ಆಕಳನ್ನು 'ಬವಲಿ' ಎಂದು ಕರೆಯಲಾಗಿದೆ. ಬವಲಿ ಎಂಬ ಹೆಸರು 'ಬಹುಲ' ಎಂಬ ಸಂಸ್ಕೃತ ಹೆಸರಿನ ಅಪಭ್ರಂಶ ಎಂದು ಹೇಳುವವರಿದ್ದಾರೆ.

ಈ ಆಕಳು ಆಶ್ರಮವಾಸಿಯಾಗಿದೆ. ಈ ಹಾಡಿನ ವಿಶಿಷ್ಟತೆ ಎಂದರೆ ಈ ಕಥಾನಕ ಕೇಳಲಿಕ್ಕೆ ಬಂದವರು ಅರ್ಧದಲ್ಲಿ ಹಿಂದಿರುಗಿ ಹೋಗಬಾರದು: ಹಾಗೆ ಹೋದರೆ ಶಾಪವಿದೆ—

"ಎಂದಿಗೆ ಈ ಹಾಡ ಪೊಂದಿಸ್ತದ್ದಾರೆಂದು ।
ಅಂಗಳಕ ಬಂದು ತಿರಗೀನೆ । ಹ್ವಾದವರು ।
ಹಾಳು ದೇಗುಲದ ಕದವಾಗೆ"

ಬವಲಿಗೆ ಹೆರಿಗೆಯಾಗುವ ವಿವರಣೆಯ ನಂತರ ಅದರ ಗಿಣ್ಣದ ಹಾಲನ್ನು ಗೌಳಿಗರೆಲ್ಲ (ಗೊಲ್ಲರು) ಉಂಡ ವರ್ಣನೆ ಬರುತ್ತದೆ. ಆಶ್ರಮದ ಮುನಿಯು ಆರತಿ ಮಾಡಿ ಬವಲಿಯನ್ನು ಮೇಯಲು ಬಿಡುತ್ತಾನೆ. ಅದು ಕಾಡಿನಲ್ಲಿ ಮೇಯ್ದು ಮರಳುವಾಗ ಹುಲಿ ತಿನ್ನಬಯಸುತ್ತದೆ. ತನ್ನ ಬಾಲನಿಗೆ ಹಾಲು ಕೊಟ್ಟು ಮರಳುವೆನೆಂದು ಮಗುವಿನ ಆಣೆಯಿಟ್ಟು ಆಶ್ರಮಕ್ಕೆ ಮರಳುತ್ತದೆ. ಬವಲಿ ತನ್ನ ಜೊತೆ ಆಕಳುಗಳಿಗೆ ತನ್ನ ಕಂದನನ್ನು ಜೋಪಾನ ಮಾಡಲು ಹೇಳುತ್ತದೆ. ಹಾಗೂ ಉಪದೇಶದ ಮಾತನ್ನು ತನ್ನ ಮಗುವಿಗೆ ಹೇಳುತ್ತದೆ.

"ಭಾಂವಿ ಮ್ಯಾಲಿನ ಹುಲ್ಲ ಬಾಯುದಲಿಯ್ಯಾವೆಂದು ।
ಹೋಗಿ ಮೆಲಿ ಬ್ಯಾಡೊ ಬಾಲಮಲ್ಲಿಗೆ ನಿನ್ನ ।
ಕಾಲ ಜಾರಿದರ ಮುಣಗೀಯೊ"

ಹುಲಿಯು ಗವಿಗೆ ಮರಳಿ ಬಂದು ತನ್ನ ಪ್ರಾಣಾರ್ಪಣೆಗೆ ಸಿದ್ಧವಾಗುತ್ತದೆ. ವಚನಕ್ಕೆ ತಪ್ಪದ ಬವಲಿಯನ್ನು ಹುಲಿ ತಿನ್ನುವದಿಲ್ಲ, ಬವಲಿ ಹಾಗು ಹುಲಿಯು ಸಂಭಾಷಣೆ ನಡೆದಾಗ ದೇವರು ಪ್ರತ್ಯಕ್ಷನಾಗುತ್ತಾನೆ ಎಂಬ ವಿವರಣೆಯೊಂದಿಗೆ ಕಥಾನಕ ಮುಕ್ತಾಯುಗೊಳ್ಳುತ್ತದೆ.

## ೪. ವಿಶ್ಲೇಷಣೆ

ಗೋವಿನ ಹಾಡು ತನ್ನ ಸರಳ ಸುಂದರ ಶೈಲಿಯಿಂದ ಬದುಕಿನ ಮೌಲ್ಯಗಳನ್ನು ಶಾಶ್ವತವಾಗಿ ಹಿಡಿದಿಡಲು ಪ್ರಯತ್ನಿಸಿದೆ. ಇಲ್ಲಿ ಬರುವ ಅರಣ್ಯ ವರ್ಣನೆ, ಕಾಳಿಂಗ ಗೊಲ್ಲನ ವ್ಯಕ್ತಿತ್ವ ಹಾಗೂ ಅವನ ವೇಷ ಭೂಷಣಗಳ ವಿವರಣೆ, ಅವನು ಹಸುಗಳನ್ನು ಕರೆದ ಪರಿ, ಹುಲಿ ಹಸುವಿನ ಮಧ್ಯ ನಡೆದ ಸಂಭಾಷಣೆ, ಪರದೇಶಿಯಾಗುವ ಕರುವಿನ ಗೋಳು, ಕೊಟ್ಟ ಭಾಷೆಗೆ ಕಟ್ಟು ಬೀಳುವ ಪುಣ್ಯಕೋಟಿ, ಹುಲಿಯ ಹೃದಯ ಪರಿವರ್ತನೆ ಹಾಗೂ ಆತ್ಮಾಹುತಿ ಮುಂತಾದ ವರ್ಣನೆಗಳು ಮನಮಿಡಿಯುವಂತೆ ನಿರೂಪಣೆಗೊಂಡಿವೆ. ವಿಚಿತ್ರವೆಂದರೆ ಓದುಗರು ಕೊನೆಗೆ ಆತ್ಮಾಹುತಿ ಮಾಡಿಕೊಂಡ ಹುಲಿಯ ಬಗ್ಗೆಯೂ ಅನುಕಂಪ ತಾಳುವದು ಈ ಹಾಡಿಗೆ ಹೊಸ ತಿರುವು ನೀಡಿದೆ. ತನ್ನ ಸರಳ ಸುಂದರ ಶೈಲಿಯ ಜೊತೆಗೆ ಇದು ಒಳಗೊಂಡ ಆದರ್ಶ–ಆಶಯಗಳಿಂದಾಗಿಯೂ ಈ ಹಾಡಿನ ಹೆಗ್ಗಳಿಕೆ ಹೆಚ್ಚಿದೆ.

'ಸತ್ಯ' ಬಹುತೇಕ ಎಲ್ಲ ಮಾನವ ಸಂಸ್ಕೃತಿಗಳಲ್ಲಿ ಶ್ರೇಷ್ಠ ಎಂದು ಪರಿಗಣಿತವಾದ ಮೌಲ್ಯವಾಗಿದೆ. ಭಾರತೀಯ ಪರಂಪರೆಯಲ್ಲಂತೂ ಅದು ತನ್ನ ಪರಾಕಾಷ್ಠತೆಯನ್ನು ಮುಟ್ಟಿದೆ. ಹರಿಶ್ಚಂದ್ರ, ರಾಮ ಮುಂತಾದ ಪೌರಾಣಿಕ ವ್ಯಕ್ತಿಗಳು ಸತ್ಯಕ್ಕಾಗಿ ಜೇರೊಂದು ಹೆಸರು ಪಡೆದವರು. ಅವರು ತಮ್ಮ

ವರ್ತನೆಯಿಂದಲೇ ತಮ್ಮನ್ನು ವಿರೋಧಿಸಿದ ಶಕ್ತಿಗಳನ್ನು ಪರಿವರ್ತನೆ ಮಾಡಿದವರು. ಈ ಪೌರಾಣಿಕ ವ್ಯಕ್ತಿಗಳಿಗಿಂತ ಇದೇ ಶತಮಾನದ ವ್ಯಕ್ತಿ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ಸತ್ಯ ಅಹಿಂಸೆಯಿಂದ ಏನನ್ನಾದರೂ ಗೆಲ್ಲ ಬಹುದೆಂದು ವಿಶ್ವಕ್ಕೆ ಸಾಧಿಸಿ ತೋರಿಸಿದ ಆದರ್ಶಪ್ರಾಯರು. ಗೋವಿನ ಹಾಡು ಇಂತಹ ಸತ್ಯದ ಆರಾಧನೆಯ ಸಾಲಿಗೆ ಸೇರಿದೆ.

'ಗೋವಿನ ಹಾಡು' ಹಾಗೂ ಇಲ್ಲಿ ವಿವರಿಸಿದ ಇತರ ಹಾಡುಗಳಲ್ಲಿ ಕಂಡು ಬರುವ ಆದರ್ಶ–ಆಶಯ, ತತ್ವ ಒಂದೇ ತೆರನಾಗಿ ಕಂಡರೂ ಅವುಗಳ ನಿರೂಪಣ ಶೈಲಿ, ವಿವಿಧ ಭಾವಕ್ಕೆ ಬೀಳುವ ಒತ್ತು ಭಿನ್ನವಾಗಿವೆ. ಗೋವಿನ ಹಾಡಿನಲ್ಲಿ ಸತ್ಯ ಬಲಿದಾನಕ್ಕೆ ಒತ್ತು ಇದ್ದರೆ ಇತರ ಹಾಡುಗಳಲ್ಲಿ ಸತ್ಯ, ತ್ಯಾಗ ಮಾತೃವಾತ್ಸಲ್ಯ, ಕೌಟುಂಬಿಕ ಬಂಧನ ಹಾಗೂ ಇತರ ಜಾನಪದ ಮೌಲ್ಯಗಳಿಗೆ ಬೆಲೆ ಬಂದಿದೆ. ಈ ಎಲ್ಲ ಹಾಡುಗಳ ರೂಪ (structure) ಒಂದೇ ಆಗಿದೆ. ಉದಾಹರಣೆಯಾಗಿ– ಒಂದು ಆಕಳು (ಚಿಗರಿ) ಕಾಡಿನಲ್ಲಿ ಹುಲಿಗೆ (ಬೇಟೆಗಾರನಿಗೆ) ಸಿಗುತ್ತದೆ. ಅದು ಮಕ್ಕಳ ಮುಖ ನೋಡಿ ಹಾಲುಣಿಸಿ ಬರುವದಾಗಿ ಭಾಷೆ ನೀಡಿ ಹೋಗುತ್ತದೆ. ಕೊಟ್ಟ ಭಾಷೆಗೆ ತಕ್ಕಂತೆ ನಡೆದುಕೊಳ್ಳುತ್ತದೆ. ಹುಲಿ ಅಥವಾ ಬೇಟೆಗಾರ ಆಕಳ ಇಲ್ಲವೆ ಚಿಗರಿಯ ಸತ್ಯಕ್ಕೆ ಮೆಚ್ಚಿ ಅದನ್ನು ಬಿಟ್ಟು ಬಿಡುತ್ತದೆ. ಹುಲಿ ಸಾಯುವ ಅಥವಾ ಪರಿವರ್ತನೆ ಹೊಂದುವ ಘಟನೆ ಕವಿಯ ಚಿಂತನೆಯನ್ನು ಅವಲಂಬಿಸಿರುತ್ತದೆ. ಈ ಹಾಡುಗಳ ರೂಪ ಒಂದೇ ಆಗಿದ್ದರೂ ಇಲ್ಲಿ ಜರಗುವ ಘಟನಾವಳಿಗಳು ಭಿನ್ನವಾಗಿವೆ.

ಗೋವಿನ ಹಾಡಿನಲ್ಲಿ ವೈದಿಕ ಸಂಸ್ಕೃತಿಯ ದಟ್ಟ ಪ್ರಭಾವವನ್ನು ಕಾಣಬಹುದು. ಆದ್ದರಿಂದ ಈ ಹಾಡು ಜಾನಪದ ಶೈಲಿಯಲ್ಲಿದ್ದರೂ ಜಾನಪದ ಹಾಡಲ್ಲ. ಬೇಂದ್ರೆ, ಬೆಟಗೇರಿ ಕೃಷ್ಣಶರ್ಮರು ಜಾನಪದ ಶೈಲಿಯನ್ನು ಯಶಸ್ವಿಯಾಗಿ ದುಡಿಸಿಕೊಂಡರೇ ಹೊರತು ಜಾನಪದ ಕವಿಗಳಲ್ಲ. ಅದರಂತೆ ಈ ಹಾಡಿನಲ್ಲಿ ಬರುವ ವಿವರಣೆಗಳಿಗೆ ವೈದಿಕ–ಸಂಸ್ಕೃತಿಯ ಕವಚವಿರುವದನ್ನು ಕಾಣಬಹುದು. ಮೊದಲನೆಯದಾಗಿ ಕಾಳಿಂಗ ಗೊಲ್ಲನು ತನ್ನ ಆಕಳುಗಳಿಗೆ ಸ್ಥಾನಿಕ ಪರಂಪರೆಯ (Little tradition) ಹೆಸರುಗಳಾದ ದುರ್ಗಿ, ದ್ಯಾಮಿ, ಕಲ್ಲಿ, ಮಲ್ಲಿ, ಬಸಿ ಎಂಬ ಹೆಸರುಗಳನ್ನು ಬಳಸದೆ ಪಾರ್ವತಿ, ಲಕ್ಷ್ಮೀ ಸರಸ್ವತಿ, ಗಂಗೆ, ಗೌರಿ, ತುಂಗಭದ್ರೆ, ರಂಗನಾಯಕಿ, ಉದಯ ಭಾಸ್ಕರ ದೇವಿ, ಮುಂತಾದ ಹೆಸರುಗಳನ್ನು ಬಳಸುತ್ತಾನೆ. ಈ ಎಲ್ಲ ಅಂಕಿತನಾಮಗಳು ವಿಶಾಲ ಸಂಸ್ಕೃತಿಗೆ (Great tradition) ಸೇರಿದವುಗಳೆಂಬುದನ್ನು ಗಮನಿಸಬಹುದು.

ತಾನು ಪರದೇಶಿಯಾಗುವೆನೆಂದು ಕರು ತಾಯಿಗೆ ಹೇಳಿದಾಗ, ತಾಯಿ ಹಸು

ಕೊಟ್ಟ ಭಾಷೆಗೆ ತಪ್ಪಿದರೆ
ಸೃಷ್ಟಿಯೊಳು ಶ್ರೀ ಹರಿ ಮೆಚ್ಚನು
ಎಷ್ಟು ಕಾಲ ಇರುವದಿ ಕಾಯ
ಕಟಾಕಟಿ ಕಂದಯ್ಯನೆ'

ಎಂದು ಹೇಳಿದಾಗ ಈ ಭೌತಿಕ ದೇಹ ಶಾಶ್ವತವಲ್ಲ ವೆಂಬುದರ ಬಗ್ಗೆ, ಬದುಕಿನ ನಶ್ವರತೆಯ ಬಗ್ಗೆ ಒತ್ತು ಬಿದ್ದಿದೆ. ಹುಲಿಗವಿಗೆ ಪುಣ್ಯಕೋಟಿ ಹೊರಟು ನಿಂತಾಗ ಉಳಿದ ಹಸುಗಳು ಅದರ ಸಂಗಡ ಬರುವವೆಂದಾಗ—

"ಅಪ್ಪ ನೀವು ಎನ್ನ ಸಂಗಡ
ಬರುವದೀಗ ಉಚಿತವಲ್ಲ
ಮುನ್ನ ನಾನು ಪಡೆದ ಫಲವಿದು
ಎನ್ನ ಬಿಡುವದೆ ಎಂದಿತು"

ಇಲ್ಲಿ ಪುನರ್ಜನ್ಮ. ಕರ್ಮಫಲಗಳ ಪರಿಣಾಮ ಮುಂತಾದವುಗಳ ವಿವರಣೆ ಇದೆ. ಗೋಳಿಡುವ ಕಂದನಿಗೆ ಉಪದೇಶ ನೀಡಿ ಪುಣ್ಯಕೋಟಿ ಹುಲಿಗವಿಗೆ ಬರುವ ಮುನ್ನ—

..............................

"ಚೆಂದದಿಂದ ಪುಣ್ಯ ನದಿಯೊಳು
ಮಿಂದು ಸ್ನಾನವ ಮಾಡಿತು.

ಗೋವು ಸ್ನಾನವ ಮಾಡಿಕೊಂಡು
ಗವಿಯ ಬಾಗಿಲ ಪೊಕ್ಕು ನಿಂತು"

..............................

ಎಂಬುವ ಮುಂತಾದ ಸಾಲುಗಳಲ್ಲಿ ವೈದಿಕ ಪರಂಪರೆಯ ಮಡಿ ಮೈಲಿಗೆಯ ವಿವರಣೆ ಇದೆ. ಗವಿಯ ಬಾಗಿಲಿಗೆ ಬಂದ ಪುಣ್ಯಕೋಟಿಯ ದರ್ಶನದಿಂದ ತನ್ನ ಪೂರ್ವಜನ್ಮದ ಕರ್ಮ ಕಳೆಯಿತೆಂದು ಹುಲಿ ಹೇಳುತ್ತದೆ.

"ಅಮ್ಮ ನೀನು ಸತ್ಯವಂತೆಯು
ನಿನ್ನ ದರುಶನ ಮಾತ್ರದಿಂದಲಿ
ನಾನು ಪೂರ್ವದಿ ತಂದ ಫಲವು
ಇಂದು ಪರಿಹಾರ ಆಯಿತು".

ಪುಣ್ಯಕೋಟಿಯು ಈ ಕಥೆಯನ್ನು ಹೇಳಿದವರಿಗೆ ಕೇಳಿದವರಿಗೆ ಯಾವ ಕಾಲಕ್ಕೂ ಕಡಿಮೆಯಾಗದ ಸಿರಿ ಸಂಪತ್ತನ್ನು ಅಚ್ಯುತ ನೀಡುತ್ತಾನೆಂಬ ವಿವರಣೆಯಿದೆ. ಪ್ರಾಸಂಗಿಕವಾಗಿ ಸಮಕಾಲೀನ ಸಮಾಜದಲ್ಲಿ ಸತ್ಯನಾರಾಯಣ ಪೂಜೆ, ಮಂಗಳ ಗೌರಿ ವ್ರತ ಮುಂತಾದ ಶಿಷ್ಟ ಸಂಪ್ರದಾಯಗಳ ಕೊನೆಗೆ ಹೇಳಿದವರಿಗೆ ಕೇಳಿದವರಿಗೆ ಪುಣ್ಯದ ಪಾಲು ಇರುವ ವಿವರಣೆ ಕಾಣಬಹುದು ಅಲ್ಲದೆ ಈ ಕಾವ್ಯದಲ್ಲಿ ಬರುವ ದೇವರ ಹೆಸರುಗಳು ಸಹಿತ ಅಖಿಲ ಭಾರತ ಮಟ್ಟದ ಹಿಂದೂ ಪರಂಪರೆಗೆ (All India Hinduism) ಸೇರಿದವುಗಳೆಂಬುದನ್ನು ಗಮನಿಸಬಹುದು. ಉದಾ:- ಅಚ್ಯುತ, ನರಸಿಂಹ, ಶಿವ, ವಿಷ್ಣು ಮುಂತಾದವುಗಳು. ಒಟ್ಟಿಗೆ ಇಲ್ಲಿ ಹಿಂದುತ್ವದ ಪ್ರಮುಖ ನಂಬಿಕೆಗಳಾದ ಕರ್ಮ ಸಿದ್ಧಾಂತ, ಪುನರ್ಜನ್ಮ, ಆತ್ಮದ ಅವಿನಾಶಿತನ ಮುಂತಾದವುಗಳ ಪ್ರಭಾವ ಕಾಣಬಹುದು. ಆದ್ದರಿಂದ ಗೋವಿನ ಹಾಡು ಜಾನಪದ ಶೈಲಿಯಲ್ಲಿದ್ದರೂ, ಜಾನಪದ ಸಂಸ್ಕೃತಿಗೆ ಸೇರಿಲ್ಲ. ಇದು ಶಿಷ್ಟ ಸಂಸ್ಕೃತಿಗೆ ಸೇರಿದ್ದೆಂದು ನಂಬಲು ಮೇಲಿನ ಹಲವು ಆಧಾರಾಂಶಗಳು ಸಾಕ್ಷಿಯಾಗಿವೆ.

ಶಿಷ್ಟ ಸಂಸ್ಕೃತಿಗೆ ಸೇರಿದ ಗೋವಿನ ಹಾಡಿನಲ್ಲಿ ಹುಲಿಗೆ ಪುಣ್ಯಕೋಟಿ ಭಾಷೆ ಕೊಡುವ ವಿಧಾನ ಹಾಗು ಇತರ ಜಾನಪದ

ಹಾಡುಗಳಲ್ಲಿ ಭಾಷೆ ಕೊಡುವ ವಿಧಾನಗಳು ವ್ಯತ್ಯಾಸಗೊಂಡಿವೆ. ಗೋವಿನ ಹಾಡಿನಲ್ಲಿ—

"ಮೂರು ಮೂರ್ತಿಗಳಾಣೆ ಬರುವೆನು
ಸೂರ್ಯ ಚಂದ್ರಮರಾಣೆ ಬರುವೆನು
ಧಾರಣಿ ದೇವಿಯಾಣೆ ಬರುವೆನು
ಎಂದು ಭಾಷೆಯ ಕೊಟ್ಟಿತು"

ಇತರ ಜಾನಪದ ಹಾಡುಗಳಲ್ಲಿ ಈ ಆಣೆ, ಸಾಕ್ಷಿ...... ಜಾಮೀನುಗಳ ಸಾಧನಗಳು ಭಿನ್ನವಾಗಿವೆ.

ಡೊಳ್ಳಿನ ಹಾಡು—

"ಹೊಕ್ಕಳದಾಗ ಹಾಲ ಕರೆದು
ಯಕ್ಕಿಗಿಡದ ಜಾಮೀನ ಕೊಟ್ಟಾಳ
ಮಲೆಯ ಮೂಗಿನ ಹಾಲು ಕರೆದು
ಜಾಲಿ ಗಿಡದ ಜಾಮೀನ ಕೊಟ್ಟಾಳ"

ಹೆಣ್ಣು ಮಕ್ಕಳ ಸುವ್ವಿ ಹಾಡಿನಲ್ಲಿ—

"ಹಸಿರು ಹುಲ್ಲಿನಾಣೆ
ನೀರು ಜಬ್ಬಲದಾಣೆ
ಭೂಮ್ಯವ್ವನಾಣೆ ಬರ್ತಿನಿ ಸುವ್ವಿ"

ಆಕಳ ಹಾಡಿನಲ್ಲಿ ಹಸು (ಬಾವಲಿ) ತನ್ನ ಕಂದನ ಆಣೆಯನ್ನೇ ಕೊಡುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಜಾನಪದರು ತಮ್ಮ ಬದುಕಿನ ಅವಿಭಾಜ್ಯ ಅಂಗಗಳಾದ ಯಕ್ಕಿ, ಜಾಲಿ, ಹಸಿರು ಹುಲ್ಲು ಮುಂತಾದವುಗಳನ್ನು

ಬಳಸಿಕೊಂಡಿದ್ದಾರೆ. ರಾಮಾಯಣಗಳಲ್ಲಿ ಸಾಕ್ಷಿಗೆ ಸಾಧನವಾಗಿ ನಮಸಾಹೇಬ ಶರೀಫರು ಅವಶ್ಯವಾಗಿ ಬಳಸಿ ಕೊಂಡಿದ್ದಾರೆ. ಅಪವಾದವೆಂಬಂತೆ ಚಿಗರಿ ಹಾಡಿನಲ್ಲಿ ಬಿಟ್ಟು. ಶಿವನ ರೂಪಕ ಗಳನ್ನು ಬಳಸಿಕೊಳ್ಳಲಾಗಿದೆ. ಶಿಷ್ಟ ದೇವರುಗಳ ಬಗೆ ಇಲ್ಲಿ ಸಾಧನವಾಗಿದ್ದರೂ ಮಲ್ಲೇಶಿ ಎಂಬುವನು ಹಾಡಿ (ರಚಿಸಿ) ದ್ದಾನೆ. ಗೊಂದಲಿಗ, ಶಿಳ್ಳೆಕ್ಯಾತ ಮುಂತಾದ ಜನಾಂಗಗಳು ರಾಮಾಯಣ ಮಹಾಭಾರತದ ಕಥೆಗಳನ್ನು ಹೇಳಿದರೂ ಅವರಲ್ಲಿಯ ಮೌಲ್ಯ ಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವದಿಲ್ಲ. ಕೇವಲ ವೃತ್ತಿಗಾಗಿ ಮಾತ್ರ ಈ ಪೌರಾಣಿಕ ಹಿನ್ನಲೆಯ ಕಥಾನಕಗಳನ್ನು ಬಳಸಿಕೊಳ್ಳುತ್ತಾರೆಂಬುದನ್ನು ಗಮನಿಸಬಹುದು.

ಗೋವಿನ ಹಾಡಿನಲ್ಲಿ ಆಕಳು ಕರುವಿಗೆ ಉಪದೇಶ ಹೇಳುವ ರೀತಿ ಹಾಗೂ ಇತರ ಪಶುಗಳೊಂದಿಗೆ ನಡೆಸಿದ ಸಂಭಾಷಣೆಯಲ್ಲಿ ಶಿಷ್ಟತೆ ಎದ್ದು ಕಾಣುತ್ತದೆ. ಈಗಾಗಲೇ ಹೇಳಿದಂತೆ ಗೋವಿನ ಹಾಡಿನಲ್ಲಿ ಇಹ ಪರದ ಜೀವನ, ಕರ್ಮಫಲಗಳಿಗೆ ಒತ್ತು ಇದೆ. ಇತರ ಜಾನಪದ ಹಾಡುಗಳಲ್ಲಿ ಕರುವಿಗೆ ಬದುಕಲು ಬೇಕಾದ ನೇರ ಉಪದೇಶಗಳಿವೆ. ವಿಶಿಷ್ಟತೆ ಎಂದರೆ ಚಿಗರಿ ಹಾಡಿನಲ್ಲಿ ತಾಯಿ ತನ್ನ ಮರಿಗಳಿಗೆ ಯಾವುದೇ ಹೆಚ್ಚಿನ ಉಪದೇಶವನ್ನು ಹೇಳುವದಿಲ್ಲ.

ಗೋವಿನ ಹಾಡಿನಲ್ಲಿ—

"ಅಮ್ಮಗಳಿರ ಅಕ್ಕಗಳಿರ
ಎನ್ನ ತಾಯಿ ಒಡ ಹುಟ್ಟುಗಳಿರ

ನಿಮ್ಮ ಕಂದನೆಂದು ಕಂಡಿರಿ
ತಬ್ಬಲಿ ಮಗನೈದನ”

ಪುಣ್ಯಕೋಟಿ ಹೇಳುವ ಈ ಮಾತು. ಮಹಿಳೆಯರ ಸುಪ್ಪಿ ಹಾಡಿನಲ್ಲಿ ಬೇರೆ ರೂಪದಲ್ಲಿ ಅಭಿವ್ಯಕ್ತಗೊಂಡಿದೆ:—

“ಓಣ್ಯಾನ ಅಕ್ಕಗಳಿರ
ಓಣ್ಯಾನ ಅವ್ವಗಳಿರ
ಚೆನ್ನಬಸವಾಗೆ ಮಲಿಕೊಡರ್ಯಾಪ್ಪ ಸುಪ್ಪಿ
ಮನೇನ ತಂಗಿಗಳಿರ, ಮನೇನ ಅಕ್ಕಗಳಿರ
ಚೆನ್ನಬಸವನಿಗೆ ಮಲಿ ಕೊಡರ್ಯಾಪ್ಪ ಸುಪ್ಪಿ”

ಇತರ ಜಾನಪದ ಹಾಡುಗಳಲ್ಲಿ ಬದುಕಿನ ವ್ಯವಹಾರಕ್ಕೆ ನೇರ ಸಂಬಂಧಿಸಿದ ಉಪದೇಶಗಳಿರುವುದನ್ನು ಕಾಣಬಹುದು. ಡೊಳ್ಳಿನ ಹಾಡಿನಲ್ಲಿ—

“ಕುಟ್ಟುವರತಾಲಿ ಹೋಗಬ್ಯಾಡ ಮಗನೆ
ಬೀಸುವರತಾಲಿ ಹೋಗ ಬ್ಯಾಡ ಮಗನೆ
ಸೊಪ್ಪಿಯು ತಂದು ದಪ್ಪಾನ ಒಗೆದಾರೆ
ಸಪ್ಪಗ ಮಾರಿ ಮಾಡಬ್ಯಾಡ

ಅಕಳ ಹಾಡಿನಲ್ಲಿ—

“ಬೇಲಿ ಮ್ಯಾಲಿನ್ಹುಲ್ಲಿ ಬಾಯದಲಿಯಬ್ಯಾವೆಂದು
ಹೋಗಿ ಮೆಲಿಬ್ಯಾತೊ ಬಾಲ ಮಲ್ಲಿ। ನಿನ್ನ
ನಾಲೀಗ್ಗಿ ಮುಳ್ಳ ಮುರದ್ಯಾವ

ಮುತ್ತಿನ ಮ್ಯಾಲಿನಪ್ಪುಲ್ಲ ಹಚ್ಚಗೆಯ್ಯಾವೆಂದು
ಹೋಗಿ ಮೇಲಿಬ್ಯಾಡೊ ಬಾಲ ಮಲ್ಲಿಗಿ ನಿನ್ನ
ಕುತ್ತಿಗೆ ಸರಪ ಹರದಾವ
ಭಾಂವಿ ಮ್ಯಾಲಿನ ಹುಲ್ಲ ಜಾಯದಲಿದ್ಯಾವೆಂದು
ಹೋಗಿ ಮೇಲಿಬ್ಯಾಡೊ ಬಾಲ ಮಲ್ಲಿಗೆ ನಿನ್ನ
ಕಾಲ ಜಾರಿದರ ಮುಣಗೀಯೊ"

ಸುವ್ವಿ ಹಾಡಿನಲ್ಲಿ :—

"ಮುಂಜೇಲಿ ಏಳುತಲಿ ಗ್ವಾದಲಿ ಹತಬ್ಯಾಡ
ಒದರ ಬ್ಯಾಡ ಕೆದರ ಬ್ಯಾಡ ಬಡಿಗೇಲಿ
ಬಡಿದಾರ ನಿನ್ನ ಸುವ್ವಿ"
ಪುಟ್ಯಾಗ ಇಟ ಜೋಳ ಹೋಗಿ ತಿನ್ನಬ್ಯಾಡ
ಕಲ್ಲೀಲೆ ನಿನ್ನ ಒಗೆದಾರ ಸುವ್ವಿ
ಬೀಸಾಕ ಹರವಿದ ಜೋಳ ಹೋಗಿ ತಿನ್ನಬ್ಯಾಡ
ಗುಂಡೀಲಿ ನಿನ್ನ ಒಗೆದಾರ ಸುವ್ವಿ
ತಿಪ್ಪಿ ಮ್ಯಾಗಲ ಜಬ್ಬಿಲ ಹೋಗಿ ಮೇಯಬ್ಯಾಡ
ನಿನ್ನ ಹರಿದಾವು ಸುವ್ವಿ
ಬಾವಿ ಮ್ಯಾಗಲ ಜಬ್ಬಿಲ ಹೋಗಿ ತಿನ್ನಲಿ ಬ್ಯಾಡ
ಮಿಡಿ ನಾಗ ನಿನ್ನ ಕಡಿದಾರ ಸುವ್ವಿ"

ಹೀಗೆ ಜಾನಪದರು ಬದುಕಿನ ಹತ್ತಿರದ ಘಟನೆಗಳು ಹಾಗೂ ಅವುಗಳ ಪರಿಣಾಮಗಳನ್ನು ನಿದರ್ಶನವಾಗಿ ಬಳಸಿ ಕೊಂಡಿದ್ದಾರೆ. ಗೋವಿನ ಹಾಡಿನಲ್ಲಿ ಮುಗ್ಧತೆಯ ಸಂಕೇತ

ವಾಗಿ ಕೇವಲ ಹುಲಿಯ ಬಗ್ಗೆ ಮಾತ್ರ ಎಚ್ಚರಿಕೆಯ ಮಾತುಗಳಿವೆ. ಇತರ ಜಾನಪದ ಹಾಡುಗಳಲ್ಲಿ ಕ್ರೌರ್ಯದ ಸಂಕೇತವಾಗಿ ಮಾನವ ಹಾಗೂ ಹಾವುಗಳು ಬಳಸಲ್ಪಟ್ಟಿವೆ.

ಗೋವಿನ ಹಾಡು ಹಾಗೂ ಇದನ್ನು ಹೋಲುವ ಜಾನಪದ ಹಾಡುಗಳಲ್ಲಿ ಸ್ಪಷ್ಟವಾದ ಎರಡು ವ್ಯತ್ಯಾಸಗಳಿವೆ. ಮೊದಲನೆಯದಾಗಿ ಗೋವಿನ ಹಾಡಿನ ಪುಣ್ಯಕೋಟಿ ಬಂಜೆಯಾಗಿಲ್ಲ. ಮೊದಲೇ ಅದಕ್ಕೆ ಮಗುವಿದೆ. ಆದರೆ ಡೊಳ್ಳಿನ ಹಾಡಿನ ಹಾಗೂ ಮಹಿಳೆಯರ ಹಾಡಿನ ಗೋವುಗಳಿಗೆ ಮಕ್ಕಳಿಲ್ಲ. ಬಂಜೆತನ ಕಳೆದುಕೊಳ್ಳಲು ಶಿವನಲ್ಲಿಗೆ ಹೋಗಿ ಆಶೀರ್ವಾದ ಪಡೆದು 'ಚೆನ್ನಬಸವ'ನೆಂಬ ಮಗುವನ್ನು ಪಡೆಯುತ್ತದೆ. ಈ ಚೆನ್ನಬಸವನೆಂಬ ಹೆಸರು ಬರಲು ಬಹುಶಃ ವೀರಶೈವ ಸಂಸ್ಕೃತಿಯ ಪ್ರಭಾವವಿರಬಹುದು. ಅಲ್ಲದೆ ಕಷ್ಟದಿಂದ ಮಕ್ಕಳನ್ನು ಪಡೆದರೂ ಸಹಿತ. ವಚನ ಪೂರ್ತಿಗೆ ಹುಲಿಗವಿಗೆ ಹೋಗುವದು ಜಾನಪದರ ಮೌಲ್ಯಗಳ ಗಟ್ಟಿತನವೆಂದು ಊಹಿಸಬಹುದು. ರಿವಾಯತ್ ಹಾಗೂ ಲಾವಣಿ ಹಾಡಿನಲ್ಲಿ ಬರುವ ಆಕಳಿಯು ಸಹಿತ ಬಂಜೆಯಾಗಿಲ್ಲ. ಇಲ್ಲಿ ಬರುವ ನಬಿಸಾಹೇಬರನ್ನು ಶರಣರೆಂದು ಕರೆದಿರುವದು ಲಿಂಗಾಯತೀಕರಣ ಪ್ರಕ್ರಿಯೆಯ ಪ್ರಭಾವವಾಗಿರಬಹುದು. ಎರಡನೆಯದಾಗಿ ಗೋವಿನ ಪುಣ್ಯಕೋಟಿ ವಚನ ಪೂರ್ತಿಗಾಗಿ ಒಂಟಿಯಾಗಿ ಹುಲಿಗವಿಗೆ ಹೋಗುತ್ತದೆ. ಆದರೆ ಇತರ ಜಾನಪದ ಹಾಡುಗಳಲ್ಲಿಯ ಆಕಳು ಹಾಗು ಕರು ತನ್ನ ಮಕ್ಕಳು ಮರಿಗಳೊಂದಿಗೆ ಹುಲಿ (ಬೇಟೆಗಾರನಲ್ಲಿಗೆ) ಗವಿಗೆ ಹೋಗುತ್ತದೆ. ಬಹುಶಃ ಶಿಷ್ಟ ಸಂಸ್ಕೃತಿಯಲ್ಲಿ ತನ್ನ ಕಂದನಿಗೆ

ತಾನೇ ಮೊದಲೆಂಬ ವೈಯಕ್ತಿಕ ಪ್ರಜ್ಞೆ ಇಲ್ಲಿ ಹೆಚ್ಚು ಜಾಗೃತವಾಗಿದೆ. ವಾಲ್ಮೀಕಿಯ ಬೇಡ ಕಾಲಗಳಲ್ಲಿ ಅವನ ಕುಟುಂಬದ ಸದಸ್ಯರು ಪಾಲ್ಗೊಳ್ಳುವುದಿಲ್ಲ ಎಂಬ ಪೌರಾಣಿಕ ಕಥೆಯನ್ನು ಪ್ರಾಸಂಗಿಕವಾಗಿ ಇಲ್ಲಿ ಸ್ಮರಿಸಬಹುದು. ಜಾನಪದರಲ್ಲಿ ಸಾಮೂಹಿಕ ಜವಾಬ್ದಾರಿ, ಕುಟುಂಬ ಐಕ್ಯತೆ ಹೆಚ್ಚು ಜಾಗೃತವಾಗಿರುತ್ತವೆ. ಆದ್ದರಿಂದಲೇ ಜಾನಪದ ಹಾಡುಗಳಲ್ಲಿ ತಾಯಿ–ಮರಿ ಎಲ್ಲರೂ ಒಟ್ಟಿಗೆ ಮರಣ ಪರೀಕ್ಷೆಗೆ ಹೋಗುವುದು ಸಂಯುಕ್ತ ಜವಾಬ್ದಾರಿಯ ಸಂಕೇತವೆಂದು ಗ್ರಹಿಸಬಹುದೆ ?

ಗೋವಿನ ಹಾಡು ಹಾಗೂ ಇತರ ಜಾನಪದ ಹಾಡುಗಳಲ್ಲಿ ಕಂಡು ಬರುವ ಮುಖ್ಯ ವ್ಯತ್ಯಾಸವೆಂದರೆ ಪುಣ್ಯಕೋಟಿಯ ವರ್ತನೆಯಿಂದ ಹುಲಿಯ ಬದುಕಿನಲ್ಲಿ ಪರಿವರ್ತನೆಯಾಗುತ್ತದೆ.

"ಎನ್ನ ಒಡ ಹುಟ್ಟಕ್ಕ ನೀನು
ನಿನ್ನ ತಿಂದು ನಾನೇನ ಪಡೆವೆನು
ನಿನ್ನ ಪಾದದ ಮೇಲೆ ಬಿದ್ದು
ಎನ್ನ ಪ್ರಾಣವ ಬಿಡುವೆನು— ಎಂದು ಹುಲಿ
ಮೂರು ಮೂರ್ತಿಗೆ ಕೈಯ ಮುಗಿದು
ಸೇರಿ ಎಂಟು ದಿಕ್ಕ ನೋಡಿ
ಹಾರಿ ಆಕಾಶಕ್ಕೆ ನೆಗೆದು
ತನ್ನ ಪ್ರಾಣವ ಬಿಟ್ಟಿತು"

ಗೋವಿನ ಪದದಲ್ಲಿಯೂ ಹುಲಿ ಸಾಯುತ್ತದೆ.

ಸತ್ಯುಳ್ಳ ವಚನಕ ಮೆಚ್ಚುವೆನ ನಾನು
ಶಿವನ ಪಂತ್ಯಾಲಿ ಹೋಗಿ ಬೇಡುವೆ ನಾನು

....................................

ಎತ್ತರಲಿ ಹೋಗಿ ಹುಲಿ ಕೊಟ್ಟಿತು ಪ್ರಾಣ
ಕೋಲು ಕೋಲ ಮುತ್ತಿನ ಕೋಲ

ಚಿಗರಿ ಲಾವಣಿಯಲ್ಲಿ ಅರಸ ಬೇಟೆಗಾರ ಸಂತನಾಗುತ್ತಾನೆ. ಸತ್ಯಕ್ಕೆ ಜಯವುಂಟು ಎಂಬುದು ಈ ಎಲ್ಲಾ ಹಾಡುಗಳ ಸಂದೇಶ ವಾಗಿದೆ. ಆದರೆ ಹುಲಿಯು (ಬೇಟೆಗಾರನ ಪರಿವರ್ತನೆ) ಸಾವು ಜಾನಪದ ಹಾಡುಗಳಲ್ಲಿ ವಿಭಿನ್ನವಾಗಿದೆ.

ಹುಲಿ (ಬೇಟೆಗಾರ) ಕ್ರೌರ್ಯ–ಹಿಂಸೆಯ ಸಂಕೇತವಾದರೆ ಆಕಳು ಹಾಗೂ ಚಿಗರಿ ಸತ್ಯ ಅಹಿಂಸೆಯ ಸಂಕೇತಗಳಾಗಿವೆ. ಪುಣ್ಯಕೋಟಿಯ ಎದುರು ವ್ಯಾಘ್ರ ಸಾಯುತ್ತದೆ ಎಂದರೆ, ಸತ್ಯದ ಮುಂದೆ ಕ್ರೌರ್ಯ ಹಿಂಸೆ ಸಾಯುತ್ತವೆ ಎಂದು ಅರ್ಥ ವಾಗುತ್ತದೆ. ಸಮಕಾಲೀನ ಬದುಕಿನಲ್ಲಿ ಹಿಂಸೆ ಕ್ರೌರ್ಯ ಸತ್ತಿದೆಯೆ ಎಂದರೆ ಉತ್ತರ ಬಹುಶೇಕ ನಕಾರಾತ್ಮಕವಾಗಿರುತ್ತದೆ. ನಮ್ಮ ಬದುಕಿನಲ್ಲಿ ಹಿಂಸೆ ಕ್ರೌರ್ಯಗಳು ಒಂದಿಲ್ಲೊಂದು ರೂಪ ದಲ್ಲಿ ಅವತರಿಸುತ್ತಲೇ ಇವೆ. ಕೀಸರ್ ಸತ್ತಿರಬಹುದು, ಕೀಸ ರ್‌ತ್ವ ಇದೆ. ರಾವಣ ಸತ್ತಿರಬಹುದು, ರಾವಣತ್ವ ಜೀವಂತ ವಾಗಿದೆ. ಆದ್ದರಿಂದ ಗೋವಿನ ಹಾಡಿನಲ್ಲಿ ಹುಲಿ ಸಾಯುತ್ತಿದೆ ಎಂದರೆ ಬದುಕು ಹೀಗೆ ಇರಬೇಕು ಇಲ್ಲವೆ ಆಗಬೇಕು ಎಂಬ ಅಪೇಕ್ಷೆಯ ಆದರ್ಶವಾದ ಇಲ್ಲಿದೆ. ಇತರ ಹಾಡುಗಳಲ್ಲಿ ಹುಲಿ ಸಾಯುವದಿಲ್ಲ ಆದರೆ ವಚನ ಪಾಲಿಸಿದ ಆಕಳನ್ನು ಬದುಕಲು

ಬರುತ್ತದೆ. ಅಂದರೆ ಜಾನಪದ ನಂಬಿಕೆ ಮೌಲ್ಯಗಳು ಬದುಕಿಗೆ ಹೆಚ್ಚು ಸಮೀಪವಾಗಿವೆ ಎಂದು ಹೇಳಬಹುದು. ಒಟ್ಟಿಗೆ ಶಿಷ್ಟ ಸಾಹಿತ್ಯ ಆದರ್ಶಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟರೆ. ಜಾನಪದ ಜೀವನದ ಮೌಲ್ಯಗಳಿಗೆ ಹೆಚ್ಚು ಸಮೀಪವಾಗಿದೆ ಎಂದು ಹೇಳಬಹುದು.

ಕೊನೆಯದಾಗಿ 'ಪುಣ್ಯಕೋಟಿ' ಗೋವಿನ ಹಾಡು ಮಹಾಭಾರತ ಹಾಗೂ ಇತರ ಸಂಸ್ಕೃತ ಪುರಾಣಗಳಲ್ಲಿ ನಿರೂಪಣೆಗೊಂಡಿದೆ ಎಂಬ ವಿವರಣೆಗಳಿವೆ. ಈ ಸಂಸ್ಕೃತ ಮೂಲದ ಕಥೆ ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಹರಿದು ಬಂದಿದೆ ಎಂದು ನಂಬಲಾಗಿದೆ. ಆದರೆ ಶಿಷ್ಟ ಸಾಹಿತ್ಯದಿಂದ ಜಾನಪದ ಸೃಷ್ಟಿಯಾಗುತ್ತದೆಯ ಅಥವಾ ಜಾನಪದ ಬೇರಿನಿಂದ ಶಿಷ್ಟ ಸಾಹಿತ್ಯ ಚಿಗುರೊಡೆಯುತ್ತದೆಯೆ ಎಂಬ ಪ್ರಶ್ನೆಗೆ ಅವುಗಳ ಪರಸ್ಪರ ಕೊಡಕೊಳ್ಳಿ ಇದೆ ಎಂದು ಮಾತ್ರ ಹೇಳಬಹುದು. ಆದರೆ ಜನಪದದಿಂದ ಶಿಷ್ಟಕ್ಕೆ ಬಂದುದ್ದು ಹೆಚ್ಚು. ಸಾಂಸ್ಕೃತಿಕ ಪ್ರಸರಣ (Cultural diffusion) ಮಾನವ ನಾಗರೀಕತೆಯಲ್ಲಿ ನಿರಂತರವಾಗಿ ಜರಗುವ ಪ್ರಕ್ರಿಯೆ. ಆದ್ದರಿಂದ ಇಲ್ಲಿ ಕಾಣುವ ಕೆಲವು ಜಾನಪದ ಹಾಡುಗಳಲ್ಲಿ ಪೂರಕ ಹೋಲಿಕೆ ಇರುವುದನ್ನು ಕಾಣಬಹುದು. ಪ್ರಸ್ತುತವಾಗಿ ಬಹುಲೋಪಾಖ್ಯಾನ ಮೊದಲೊ? ಗೋವಿನ ಹಾಡು ಮೊದಲೊ? ಅಥವಾ ಇತರ ಯಾವುದೇ ಜಾನಪದ ಹಾಡು ಮೊದಲೊ ಎಂಬ ಪ್ರಶ್ನೆಗಳು ಇಲ್ಲಿ ಗೌಣ. ಸಂಸ್ಕೃತ ಮೂಲದ ಬಹುಲೋಪಾಖ್ಯಾನ ಕಥೆ ಸಾಂಸ್ಕೃತಿಕ ಪ್ರಸರಣದ ಪ್ರಕ್ರಿಯೆಯಿಂದ ಗೋವಿನ ಕಥೆಗೆ ಹೋಲುವ ಅಥವಾ ಸಮೀಪ

ಅರ್ಥ ಹೊಂದಿದ ಗೀತ ಕಥಾನಕಗಳು ಇತರ ಭಾರತೀಯ ಭಾಷೆಗಳಲ್ಲಿ ಕಾಣಿಸಿಕೊಂಡಿರಬಹುದಲ್ಲವೆ ? ತಜ್ಞರು ಈ ಬಗ್ಗೆ ಗಮನ ಹರಿಸಿದರೆ ಈ ವಿಷಯದ ಮೇಲೆ ಹೆಚ್ಚು ಬೆಳಕು ಚೆಲ್ಲಿದಂತಾಗುತ್ತದೆ.[೩]

## ಅಡಿ ಟಿಪ್ಪಣಿಗಳು

೧ ಸೋಮಶೇಖರ ಇಮ್ರಾಪುರ–ಜಾನಪದ ವ್ಯಾಸಂಗ ೧೯೭೯
ಚೇತನ ಪ್ರಕಾಶನ, ಧಾರವಾಡ

೨ ಅ) ಸಿ. ಪಿ. ಕೃಷ್ಣಕುಮಾರ–ಕನ್ನಡ ವಿಶ್ವಕೋಶ, ಸಂ. ಪುಟ-೬
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಬ) ಸುಶೀಲ ಪಟ್ಟಣಶೆಟ್ಟಿ–ಕನ್ನಡ ಜನಪದ ಸಾಹಿತ್ಯದ ಸಂಕಲನ ದೃಷ್ಟಿ. ಜಾನಪದ ಸಾಹಿತ್ಯ ದರ್ಶನ-೧. ೧೯೭೪ ಸಂ. ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

೩. ತೆಲುಗು ಭಾಷೆಯಲ್ಲಿ ಇಂತಹ ಒಂದು ಹಾಡು ಇದೆ. ಪುಟ ೯೭–೯೯, ೧೯೬೩. ಮಹಿಳೆಯರ ಪೌರಾಣಿಕ ಹಾಡು, ಭಾರತ ಭಾಗವತ ಕಥೆಯ ಹಾಡುಗಳು. ಕೃಷ್ಣ ಶ್ರೀ ಸಂಪಾದಕ, ಆಂಧ್ರ ಸಾರಸ್ವತ ಪರಿಷತ್ತು, ತಿಲಕ ರೋಡ, ಹೈದರಾಬಾದ.

# ಆಕರಗಳ ವಿವರ

೧. ಗೋವಿನ ಹಾಡು
ಸಂ. ಆರ್. ಎಸ್. ಮುಗಳಿ
ಪ್ರ. ಕನ್ನಡ ಸಾಹಿತ್ಯ ಪರಿಷತ್ತು (೧೯೭೨)
ಬೆಂಗಳೂರು–೧೮

೨. ಚನ್ನಬಸವನ ಹಾಡು (ಡೊಳ್ಳಿನ ಹಾಡು)
ಹಾಡಿದವರು : ಸಿದ್ದಪ್ಪ ಬಿಜಕಲ್ಲ ಹಾಗೂ ಸಂಗಡಿಗರು,
ಸಾ : ಹುನಗುಂದ (ಅಪ್ರಕಟಿತ)

೩. ಗೋಪ್ಯೆವ್ವನ ಹಾಡು.
(ಹೆಣ್ಣುಮಕ್ಕಳ ಸುವ್ವಿ ಹಾಡು)
ಹಾಡಿದವರು : ಸಂಗಮ್ಮ ಹೊನ್ನಳ್ಳಿ
ಹಾಗೂ ಸಂಗಡಿಗರು (ಅಪ್ರಕಟಿತ)
ಹುನಗುಂದ

೪. ಗೋಪಿಯು ಪದ (ಕೋಲಾಟದ ಪದ)
ಗಂಡಸರ ಜಾನಪದ ಹಾಡುಗಳು,
ಸಂ : ನಿಂಗಣ್ಣ ಸಣ್ಣಕ್ಕಿ
ಸಮಾಜ ಪುಸ್ತಕಾಲಯ,
ಧಾರವಾಡ, ೧೯೭೮

೫. ಚಿಗರಿ ಪದ
ಹೇಳುವೆ ಮಂಜಕೂರಾ,
ಸಂ : ನಿಂಗಣ್ಣ ಸಣ್ಣಕ್ಕಿ
ಸಾಹಿತ್ಯ ಭಂಡಾರ,
ಹುಬ್ಬಳ್ಳಿ–೨೦

೭. ಚಿಗರಿ ಭಯಾನ್ (ರಿವಾಯತ್)
ಹಾಡಾಕೆ ಬೈಗುಂಟೆ ಬೆಳಗುಂಟೆ
ಸಂ: ಎಂ. ಬಿ. ನಟರಾಜ ಹಾಗೂ ಸಂಗಡಿಗರು
ಪ್ರ: ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

೭. ಮಾರಿಯಾಕ ಮಾಡಿದಿ ಸಣ್ಣ ವಿಜಾಪೂರ ಜಿಲ್ಲೆ ಲಾವಣಿಗಳು
ಸಂ. ಕ್ಯಾತನಹಳ್ಳಿ ರಾಮಣ್ಣ,
ಪ್ರ. ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

೮. ಚಿಗರಿ ಲಾವಣಿ
ಗಂಡಸರ ಜಾನಪದ ಹಾಡುಗಳು
ಸಂ. ನಿಂಗಣ್ಣ ಸಣ್ಣಕ್ಕಿ
ಪ್ರ: ಸಮಾಜ ಪುಸ್ತಕಾಲಯ,
ಧಾರವಾಡ ೧೯೭೮

೯. ಚಿಗರಿ ಹಾಡು
ಹಾಡಿದವರು: ಬಸವರಾಜ ಗುಂಡಪ್ಪ ಬಂಗಾರಿ
ಹಾಗೂ ಸಂಗಡಿಗರು
ಹುನಗುಂದ

೧೦. ಚಿಗರಿ ಕರ್ಬಲ್ ಹಾಡು,
ಎಂ. ಅಕಬರ್ ಅಲಿ, ಜಾನಪದ ಸಾಹಿತ್ಯ ದರ್ಶನ–೧

೧೯೭೪, ಸಂ: ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೩.

೧೧. ಆಕಳ ಹಾಡು
ಮಲ್ಲಿಗೆ ದಂಡೆ
ಸಂ: ಕಾಪಸೆ ರೇವಪ್ಪನವರು,
ಸಮಾಜ ಪುಸ್ತಕಾಲಯ,
ಧಾರವಾಡ

೧೨. ಮಾತೃವಾತ್ಸಲ್ಯ (ಗೋವಿನ ಕಥೆ)
ಎಸ್. ಎ. ಧರಿಗೌಡ
ಜಯ ಕರ್ನಾಟಕ, ಪುಟ–೬೭೮
ಸಂ. ೮ ಸಂಚಿಕೆ ೧೦, ೧೯೮೦ (ಅಗಸ್ಟ)

# ಉಪನ್ಯಾಸ ಗ್ರಂಥಮಾಲೆಯ
## ಕೆಲವು ಪ್ರಕಟನೆಗಳು

---

೧ ಜನಪದ ಗೀತಗಳಲ್ಲಿ ಶೃಂಗಾರ

—ಗುರುಪಾದ ಛಿವಾರಿ

೨ ಕನ್ನಡ ಜನಪದ ಕಾವ್ಯಗಳಲ್ಲಿ ಪ್ರಣಯ ಚಿತ್ರಣ

—ಬಸವರಾಜ ಸಬರದ

೩ ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ

—ಎಂ. ಬಿ. ಹೂಗಾರ

೪ ಜನಪದ ಸಾಹಿತ್ಯದಲ್ಲಿ ಹಾಸ್ಯ

—ಮೃತ್ಯುಂಜಯ ಹೊರಕೇರಿ

೫ ಜನಪದ ಸಾಹಿತ್ಯದಲ್ಲಿ ನೀತಿ

—ಎಂ. ಎನ್. ವಾಲಿ

೬ ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಛಲಕ

— ಸಿಂಪಿ ಲಿಂಗಣ್ಣ

೭ ಜನಪದ ಕಾವ್ಯ

—ಗಿರಡ್ಡಿ ಗೋವಿಂದರಾಜ

೮ ಜನಪದ ಕಾವ್ಯದಲ್ಲಿ ಜೀವನ ಧರ್ಮ

—ಬಿ. ವ್ಹಿ. ಮಲ್ಲಾಪೂರ

೯ ಜಾನಪದ ವೀರಗೀತೆಗಳು

—ಬಿ. ಬಿ. ಮಹೀಶವಾಡಿ

೧೦ ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನಚಿತ್ರ

—ದೇವೇಂದ್ರಕುಮಾರ ಹಕಾರಿ

---

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ